**ಚಾಮರಾಜನಗರದ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017-18ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದ ನ್ಯೂನತೆಗಳು/ಆಕ್ಷೇಪಣೆ ಹಾಗೂ ವಸೂಲಾತಿ ಮೊಬಲಗು ಮತ್ತು ಕಂಡಿಕೆಗಳ ವಿವರ:-**

| ಕ್ರ | ಕಂಡಿಕೆ ಸಂಖ್ಯೆ | ಸಂಕ್ಷಿಪ್ತ ವಿವರಗಳು | ಆಕ್ಷೇಪಣೆ ಮೊಬಲಗು | ವಸೂಲಾತಿ ಮೊಬಲಗು |
|---|---|---|---|---|
| 1 | 03 | ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನ ವರದಿ ಸಲ್ಲಿಸದೇ ಇರುವುದು. | - | - |
| 2 | 04 | ಆಯ-ವ್ಯಯದ ಬಗ್ಗೆ. | - | - |
| 3 | 05 | ಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವುದು | - | - |
| 4 | 08 | ಹೂಡಿಕೆಗಳಲ್ಲಿನ ಮೊತ್ತಕ್ಕೆ ಟಿಡಿಎಸ್ ಕಡಿತಗೊಳಿಸಿರುವುದು. | 182687.00 | - |
| 5 | 09 | ರಶೀತಿ ಪುಸ್ತಕಗಳ ದಾಸ್ತಾನು ಬಗ್ಗೆ. | - | - |
| 6 | 14 | ಉತ್ತಮತೆ ಶುಲ್ಕದ ಪಾವತಿ ಬಗ್ಗೆ. | - | 26448.00 |
| 7 | 15 | ಸ್ಲಮ್ ಇಪ್ರೂವ್‌ಮೆಂಟ್ ಸೆಸ್ ಪಾವತಿ ಬಗ್ಗೆ | 36099.00 | - |
| 8 | 18 | ಮುಂಗಡ ಹೊಂದಾಣಿಕೆಯಾಗದೇ ಇರುವುದು. [2017-18ನೇ ಸಾಲು] | 4454000.00 | - |
| 9 | 21 | ಮಹಾಯೋಜನೆ ಪರಿಷ್ಕೃತ 2 ಟೆಂಡರ್ ಪ್ರಕ್ರಿಯೆ ಆದಾಯ, ಕಾ.ಕ.ನಿಧಿ, ಕಟಾಯಿಸದೇ ಇರುವುದು. | - | 24385.00 |
| 10 | 23 | ಕೆರೆ ಅಭಿವೃದ್ಧಿ ಶುಲ್ಕ ವಸೂಲಾತಿ ಬಗ್ಗೆ. | - | - |
| 10 | 24 ಎ+ಬಿ | ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಮೊಬಲಗಿನ ಬಡ್ಡಿಯನ್ನು ಕಡಿಮೆ ವಸೂಲಿಸಿರುವುದು. [40533+67930+63826] | - | 172329.00 |
| 11 | 26 | ಲೆಕ್ಕ ತಪಾಸಣಾ ಶುಲ್ಕ ಪಾವತಿ ಮಾಡಬೇಕಾಗಿರುವುದು. [2017-18ನೇ ಸಾಲು] | - | 20707.00 |
| | | **ಒಟ್ಟು** | **4672786.00** | **243869.00** |

ಸಹಿ/-
ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ,
ಮೈಸೂರು.

## ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ತಪಾಸಣಾ ವರದಿ:–

**1) ಪೀಠಿಕೆ :–**ಸರ್ಕಾರಿ ಆದೇಶ ಸಂಖ್ಯೆ: ನ.ಅ.ಇ/ಎಂ.ಐ.ಬಿ/97, ದಿನಾಂಕ:24.04.1998ರ ಅಧಿಸೂಚನೆ ಪ್ರಕಾರ ನಗರ ಯೋಜನಾ ಅಧಿಕಾರವನ್ನು ವಿಲೀನಗೊಳಿಸಿ ಚಾಮರಾಜನರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ನಿಯಮ 48(2)ರ ಪ್ರಕಾರ ಈ ಸಂಸ್ಥೆಯು 2017–18ನೇ ಸಾಲಿನ ಲೆಕ್ಕತಪಾಸಣೆಯನ್ನು ಕೈಗೊಂಡು ವರದಿಯನ್ನು ನೀಡಲಾಗಿದೆ. ವರದಿಯಲ್ಲಿ ಸೂಚಿಸಿದ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

## 2) ಸಾಮಾನ್ಯ ಮಾಹಿತಿ :–

| | |
|---|---|
| 1) ಲೆಕ್ಕ ಪರಿಶೋಧನೆ ಕೈಗೊಂಡ ಸಂಸ್ಥೆಯ ಹೆಸರು | **ಚಾಮರಾಜನಗರ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ** |
| 2) ಲೆಕ್ಕ ಪರಿಶೋಧನಾ ಅವಧಿ | ದಿನಾಂಕ: 01.04.2017 ರಿಂದ 31.03.2018 ರ ವರೆಗೆ (2017–18ನೇ ಸಾಲು) |
| 3) ಲೆಕ್ಕ ಪರಿಶೋಧನಾ ತಂಡದ ವಿವರ | ಶ್ರೀ.ಎಸ್.ಜಿ.ಉಮಾಮಹೇಶ್, ಲೆಕ್ಕ ಅಧೀಕ್ಷಕರು.<br>ಶ್ರೀ.ರವೀಶ್, ಲೆಕ್ಕ ಪರಿಶೋಧಕರು,<br>ಶ್ರೀ.ಮದನ್‌ರಾಜ್ ಅರಸ್.ಬಿ, ಲೆ.ಪ.ಅ [ಪರೀಕ್ಷಿತಾ] |
| 4) ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ | 16.8.2018 |
| 5) ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ | 28.8.2018 |
| 6) ತೆಗೆದುಕೊಂಡ ಮಾನವ ದಿನಗಳು | 17 ಏಕ ಮಾನವ ದಿನಗಳು. |
| 7) ಕರಡು ವರದಿಯನ್ನು ವೆಟ್ಟಿಂಗ್ ಮಾಡಿದ ಅಧಿಕಾರಿ ಹೆಸರು ಹಾಗೂ ಪದನಾಮ | **ಶ್ರೀ.ರಾಮಚಂದ್ರಯ್ಯ ಡಿ.ಆರ್**<br>ಅಪರ ನಿರ್ದೇಶಕರು (ಅಧಿಕ ಪ್ರಭಾರ)<br>ಮೈಸೂರು. |
| 8) ಪುನರ್ ಪರಿಶೀಲನಾ ದಿನಾಂಕ | 10.09.2018 |
| **ಆಡಳಿತ ವರ್ಗ :–** | |
| 1] ಆಯುಕ್ತರು. | ನಿಸಾರ್ ಅಹಮದ್.ಟಿ ದಿನಾಂಕ:1.4.2017–31.7.2017<br>ಲಸುಮಾ ನಾಯ್ಕ. [ಪ್ರಭಾರ] ದಿನಾಂಕ:31.7.2017–12.2.2018<br>ಎಂ.ಉಮಾನಂದ.ರೈ ದಿನಾಂಕ:12.2.2018–31.7.2018 |
| 2] ಅಧ್ಯಕ್ಷರು. | ಸುಹೇಲ್ ಅಲಿಖಾನ್, ದಿನಾಂಕ:1.4.2017–31.3.2018 [ಮುಂದುವರಿದಿದ್ದಾರೆ] |
| 3] ನಗರ ಯೋಜಕ | ರವಿಕಿರಣ್.ಬಿ.ಆರ್. ದಿನಾಂಕ:1.4.2017–22.4.2017<br>ಪರಶಿವಮೂರ್ತಿ.ಎಸ್.ಆರ್ ದಿನಾಂಕ:22.4.2017 ರಿಂದ 31.3.2018 |

**3) ಹಿಂದಿನ ಸಾಲಿನ  ಲೆಕ್ಕ ಪರಿಶೋಧನಾ ವರದಿಗೆ ಅನುವರ್ತನಾ ವರದಿ ಸಲ್ಲಿಸದೇ ಇರುವುದು.**

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 1998–99ನೇ ಸಾಲಿನಿಂದ 16–17ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುವರ್ತನಾ ವರದಿಯನ್ನು ಸಲ್ಲಿಸಿರುವುದಿಲ್ಲ. ಆಯುಕ್ತರು ಈ ಬಗ್ಗೆ ವೈಯಕ್ತಿಕ ಗಮನ ಹರಿಸಿ, ಹಿಂದಿನ ಸಾಲಿನ ಎಲ್ಲಾ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಸೂಚಿಸಿರುವ ನ್ಯೂನತೆಗಳಿಗೆ ಅನುವರ್ತನಾ ವರದಿಯನ್ನು ಸಲ್ಲಿಸಿ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಸೂಚಿಸಲಾಗಿದೆ. ವಿವರದ ಅನುಬಂಧ ಲಗತ್ತಿಸಿದೆ. [ಅನುಬಂಧ–01]

**4) ಆಯ–ವ್ಯಯ:–**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ–1987 ಅಧ್ಯಾಯ–5ರ ನಿಯಮ–42ರನ್ವಯ ಆಯ–ವ್ಯಯವನ್ನು ಫೆಬ್ರವರಿ–01ನೇ ತಾರೀಖಿನೊಳಗೆ ತಯಾರಿಸಿ ಪ್ರಾಧಿಕಾರದ ಸಭೆಯ ಅನುಮೋದನೆ ಪಡೆಯಬೇಕಾಗಿರುತ್ತದೆ. ಹಾಗೂ ನಿಯಮ 45ರನ್ವಯ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯಬೇಕಾಗಿರುತ್ತದೆ. 2017–18ನೇ ಸಾಲಿನ ಆಯ–ವ್ಯಯವನ್ನು ದಿನಾಂಕ:2.3.2018ರ ಪ್ರಾಧಿಕಾರದ 64ನೇ ಸಾಮನ್ಯ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿದೆ.

ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡಿರುವ ಆಯ–ವ್ಯಯದ ನಿರೀಕ್ಷಿತ ಮತ್ತು ವಾಸ್ತವಿಕ ಜಮಾ ಮತ್ತು ಖರ್ಚುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

**2017–18**

| ವಿವರ | ಜಮಾ | ಖರ್ಚು |
|---|---|---|
| ನಿರಿಕ್ಷೀತ | 122060000.00 | 115118500.00 |
| ವಾಸ್ತವಿಕ | 6097943.00 | 6863989.00 |

2017–18ನೇ ಸಾಲಿನ ಆಯವ್ಯಯವನ್ನು ಪರಿಶೀಲಿಸಲಾಗಿ ನಿರೀಕ್ಷಿತ ಆದಾಯ ಮತ್ತು ವಾಸ್ತವಿಕ  ಆದಾಯಗಳ ನಡುವೆ ತುಂಬಾ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ. ನಿರೀಕ್ಷಿತ

ಪ್ರತಿ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುವರ್ತನಾ ವರದಿಯನ್ನು ಪುಸ್ತಕ ರೂಪದಲ್ಲಿ ಸರ್ಕಾರಕ್ಕೆ ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗೆ ಈಗಾಗಲೇ ಕಳುಹಿಸಲಾಗಿದೆ. ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಾಮರಾಜನಗರ ಇವರಿಗೆ ಈ ಕಚೇರಿ ಪತ್ರ ಸಂ:ಚಾರಾನಅಪ್ರಾ/ಲೆತವ/14–16/2016–17/55 ದಿನಾಂಕ:22–05–2017 ರಲ್ಲಿ ಪ್ರಾಧಿಕಾರದ 1988–99 ರಿಂದ 2014–16ನೇ ಸಾಲಿನವರೆಗಿನ ಲೆಕ್ಕ ಪರಿಶೋಧನೆಯ ಅನುವರ್ತನಾ ವರದಿಯನ್ನು ದಾಖಲಾತಿಗಳೊಂದಿಗೆ ಪರಿಶೀಲಿಸಿ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆ ಹಾಗೂ ವಸೂಲಾತಿಯ ಮೊಬಲಗನ್ನು ಕೈಬಿಡುವ ಬಗ್ಗೆ ವರದಿಯನ್ನು ನೀಡಲು ಕೋರಲಾಗಿದೆ. ವರದಿಯನ್ನು ನೀಡಿದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು.

ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ನಅಇ:217:ಮೈಅಪ್ರಾ:2017 ದಿ:12–07–2017 ರಲ್ಲಿ ಪ್ರಾಧಿಕಾರದ 2017–18ನೇ ಸಾಲಿನ ಆಯವ್ಯಯ ಅಂದಾಜಿಗೆ ಮಂಜೂರಾತಿ ನೀಡಿರುತ್ತಾರೆ (ಪ್ರತಿ ಲಗತ್ತಿಸಿದೆ). ಇನ್ನು ಮುಂದೆ ನಿರೀಕ್ಷಿತ ಹಾಗೂ ವಾಸ್ತವಿಕ ಆದಾಯಗಳನ್ನು ಸಿದ್ದಪಡಿಸುವಾಗ ವಾಸ್ತವಿಕ ಅಂಕಿ ಅಂಶಗಳೊಂದಿಗೆ ತಯಾರಿಸಲಾಗುವುದು.

ಆದಾಯ ರೂ. 122060000.00ಗಳಿದ್ದು ವಾಸ್ತವಿಕ ಆದಾಯವು ರೂ.6097943.00ಗಳಿದ್ದು ನಿರೀಕ್ಷಿತ ಆದಾಯ ಮತ್ತು ವಾಸ್ತವಿಕ ಆದಾಯಗಳಿಗೆ ಶೇ.95ರಷ್ಟು ಆದಾಯ ಕೊರತೆ ಇರುವುದು ಕಂಡುಬಂದಿರುತ್ತದೆ. ವಸತಿ ಯೋಜನೆಯಿಂದ ಅಂದಾಜು ಆದಾಯ ರೂ.100000000.00ನ್ನು ನಿರೀಕ್ಷಿಸಿದ್ದು, ಇದರಿಂದ ಇಲ್ಲಿಯವರೆಗೆ ಯಾವುದೇ ಆದಾಯ ಪ್ರಾಧಿಕಾರಕ್ಕೆ ಬಂದಿರುವುದಿಲ್ಲ. ಆದಾಗ್ಯೂ 2016–17ನೇ ಸಾಲಿನಲ್ಲಿ 80000000.00 ನಿರೀಕ್ಷಿತ ಆದಾಯ ಮತ್ತು 2015–16ನೇ ಸಾಲಿನಲ್ಲಿ 50000000.00 ನಿರೀಕ್ಷಿತ ಆದಾಯವನ್ನು ಪ್ರಾಧಿಕಾರವು ನಿರೀಕ್ಷಿಸಿದ್ದು, ಸದರಿ ಸಾಲಿನಲ್ಲಿ ಯಾವುದೇ ಆದಾಯವು ಇಲ್ಲಿಯವರೆಗೆ ಬಂದಿರುವುದಿಲ್ಲ. ಆದರೂ ಸಹ 2017–18ನೇ ಸಾಲಿನಲ್ಲಿ ನಿರೀಕ್ಷಿತ ಆದಾಯದಲ್ಲಿ ರೂ.100000000.00 ನಿರೀಕ್ಷಿಸಿರುವುದು ಅಸಂಬದ್ಧವಾಗಿರುತ್ತದೆ. ಅಂದಾಜು ವ್ಯಯದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ.83500000.00 ವೆಚ್ಚಗಳನ್ನು ಮೀಸಲಿರಿಸಿದ್ದು, 2016–17ನೇ ಸಾಲಿನಲ್ಲಿ ವಾಸ್ತವಿಕ ವೆಚ್ಚವೇ 390196.00 ರೂ.ಗಳಾಗಿದ್ದು ಹೇಗೆ ರೂ.83500000.00ನ್ನು 2017–18ನೇ ಸಾಲಿಗೆ ಮೀಸಲಿರಿಸಿದ್ದರೆಂಬುದು ಅಂದಾಜಿಗೆ ನಿಲುಕದಾಗಿರುತ್ತದೆ.

ಮುಂದೆ ಈ ರೀತಿ ಆದಾಯ ನಿರೀಕ್ಷಿತ ವೆಚ್ಚ ಮತ್ತು ವಾಸ್ತವಿಕ ಆದಾಯಗಳನ್ನು, ವ್ಯಯ, ವೆಚ್ಚ ಸಿದ್ಧಪಡಿಸುವಾಗ ವಾಸ್ತವಿಕ ಅಂಕಿ ಅಂಶಗಳೊಂದಿಗೆ ತಯಾರಿಸಲು ಸೂಚಿಸಲಾಗಿದೆ.

## 5) ಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವ ಬಗ್ಗೆ:–

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದ್ದು ಪ್ರತಿ ಮಾಹೆಯ ಮಾಸಿಕ ಲೆಕ್ಕಪತ್ರಗಳನ್ನು ತಯಾರಿಸಿ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಸಲ್ಲಿಸಿರುವ ಬಗ್ಗೆ ಮಾಹಿತಿ ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ, ಹಾಗೂ ವಾರ್ಷಿಕ ಲೆಕ್ಕ ಪತ್ರಗಳನ್ನು ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಚಾಮರಾಜನಗರ ಇವರಿಗೆ ಸಲ್ಲಿಸಬೇಕಾಗಿರುತ್ತದೆ. ಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಪ್ರಾಧಿಕಾರದ ಅನುಮೋದನೆ ಪಡೆದ ನಂತರ ನಿಗದಿತ ವೇಳೆಯಲ್ಲಿ ಸಲ್ಲಿಸಲು ಅಗತ್ಯಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಪ್ರಾಧಿಕಾರದ ಪ್ರತಿ ಮಾಹೆಯ ಲೆಕ್ಕಪತ್ರಗಳನ್ನು ತಯಾರಿಸಿ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಇನ್ನು ಮುಂದೆ ಸದರಿ ಲೆಕ್ಕಗಳ ನಡವಳಿಗಳನ್ನು ಹಿರಿಯ ಉಪನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಾಮರಾಜನಗರ ಇವರಿಗೆ ಕಳುಹಿಸಲಾಗುವುದು.

**6) ಆರ್ಥಿಕ ಪರಿಸ್ಥಿತಿ :–**

**ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರ ಚಾ.ನಗರ ಇಲ್ಲಿನ 2017–18ನೇ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ.**

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

**ಖಾತೆ.ಸಂಖ್ಯೆ : 54013072298**

**ಬ್ಯಾಂಕ್ ಹೆಸರು: ಎಸ್.ಬಿ.ಎಂ. D.O.C ಶಾಖೆ**

**2017–18ನೇ ಸಾಲಿನ ಆರ್ಥಿಕ ಪರಿಸ್ಥಿತಿ :–**

| | |
|---|---|
| ದಿನಾಂಕ: 01–04–2017ಕ್ಕೆ ಪ್ರಾರಂಭ ಶಿಲ್ಕು | ರೂ. 5536523.00 |
| 2017–18ನೇ ಸಾಲಿನ ಜಮಾ | ರೂ. 6097943.00 |
| **ಒಟ್ಟು** | **ರೂ. 11634466.00** |
| 2017–18ನೇ ಸಾಲಿನ ಖರ್ಚು | ರೂ. 6964646.00 |
| ದಿನಾಂಕ: 31–3–2018ರ ಅಂತಿಮ ಶಿಲ್ಕು | ರೂ. 4669820.00 |
| ಬ್ಯಾಂಕ್ ಪಾಸ್ ಪುಸ್ತಕ ಪ್ರಕಾರ ಅಂತಿಮ ಶಿಲ್ಕು. | ರೂ. 4770496.00 |
| ವ್ಯತ್ಯಾಸ. | ರೂ. 100676.00 |

**ನಗದಾಗದ ಧನಾದೇಶಗಳು :–**

| **ಚೆಕ್‌ಸಂಖ್ಯೆ:** | **ಮೊತ್ತ ರೂ.** |
|---|---|
| 119061 | 10537.00 |
| 119062 | 6450.00 |
| 119063 | 9146.00 |
| 119064 | 28353.00 |
| 119065 | 1279.00 |
| 119066 | 676.00 |
| 119067 | 44235.00 |
| ಒಟ್ಟು | **100676.00** |

**7) ಮಾಹೆವಾರು ಜಮಾ ಮತ್ತು ಖರ್ಚಿನ ವಿವರ.**

| ಕ್ರ.ಸಂ | ಮಾಹೆ | ಜಮಾ | ಖರ್ಚು | ಷರಾ |
|---|---|---|---|---|
| 1 | 4/2017 | 1743492.00 | 156258.00 | |
| 2 | 5/2017 | 503700.00 | 197620.00 | |
| 3 | 6/2017 | 259887.00 | 306580.00 | |
| 4 | 7/2017 | 236400.00 | 243253.00 | |
| 5 | 8/2017 | 326440.00 | 252813.00 | |
| 6 | 9/2017 | 262676.00 | 444866.00 | |
| 7 | 10/2017 | 4710.00 | 51562.00 | |
| 8 | 11/2017 | 323610.00 | 132911.00 | |
| 9 | 12/2017 | 423969.00 | 182592.00 | |
| 10 | 01/2018 | 566250.00 | 4111840.00 | |
| 11 | 02/2018 | 546384.00 | 117948.00 | |
| 12 | 03/2018 | 900425.00 | 766403.00 | |
| | **ಒಟ್ಟು ರೂ.** | **6097943.00** | **6964646.00** | |

**8) ಹೂಡಿಕೆಗಳ ವಿವರ :-**

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದ್ದು ಪ್ರಾಧಿಕಾರದಲ್ಲಿ ಖರ್ಚಾಗದೇ ಉಳಿದಿರುವ ಹಣವನ್ನು ಹೂಡಿಕೆಗಳಲ್ಲಿ ತೊಡಗಿಸಿರುವುದು ಕಂಡುಬಂದಿರುತ್ತದೆ. ಒಟ್ಟು 6 ನಿಶ್ಚಿತ ಠೇವಣಿಗಳಲ್ಲಿ ಪ್ರಾಧಿಕಾರವು ಹೂಡಿಕೆ ಮಾಡಿದ್ದು, 4 ಠೇವಣಿಗಳು ಎಸ್.ಬಿ.ಎಂ ಬ್ಯಾಂಕಿನಲ್ಲಿ ಮತ್ತು 2 ಠೇವಣಿಗಳು ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕಿನಲ್ಲಿ ಹೂಡಿಕೆಯಲ್ಲಿ ತೊಡಗಿಸಲಾಗಿರುತ್ತದೆ. ಎಸ್‌ಬಿಐನ ಠೇವಣಿಗಳು ಪರಿಪಕ್ವವಾದ ನಂತರ ಪರಿಪಕ್ವವಾದ ಮೊತ್ತಕ್ಕೆ ನವೀಕರಿಸಿ ಮರು ಹೂಡಿಕೆ ಮಾಡಲಾಗಿರುತ್ತದೆ. ಆದರೆ ಕೆನರಾ ಮತ್ತು ಸಿಂಡಿಕೇಟ್ ಬ್ಯಾಂಕಿನ ಠೇವಣಿಗಳನ್ನು ಪರಿಶೀಲಿಸಿದಾಗ ನಿಶ್ಚಿತ ಠೇವಣಿಗಳು ಪರಿಪಕ್ವವಾಗುವ ನಂತರ ಟಿಡಿಎಸ್‌ನ್ನು ಕಡಿತಗೊಳಿಸಿ ಇನ್ನುಳಿದ ಮೊತ್ತಕ್ಕೆ ನವೀಕರಣಗೊಂಡಿರುವುದು ಕಂಡುಬಂದಿರುತ್ತದೆ. ಆದಾಯ ತೆರಿಗೆ ನಿಯಮ 1961ರ 196ನೇ ನಿಯಮದ ಅನ್ವಯ ಯಾವುದೇ ಸರ್ಕಾರಿ ಸ್ವಾಮ್ಯದ ಉದ್ದೇಶಿತ ನಿಶ್ಚಿತ ಠೇವಣಿಗಳ ಬಡ್ಡಿಯ ಮೇಲೆ ಟಿಡಿಎಸ್‌ನ್ನು ಕಡಿತಗೊಳಿಸುವಂತಿಲ್ಲ. ಆದಾಗ್ಯೂ 2012–13ನೇ

ಚಾಮರಾಜನಗರ–ರಾಮಸಮದ್ರ ನಗರಾಭಿವೃದ್ಧಿ ಪ್ರಾಧಿಕಾರ 2017–18ನೇ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಖರ್ಚಾಗದೇ ಉಳಿದಿರುವ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್ ಆದ ಎಸ್.ಬಿ.ಎಂನಲ್ಲಿ ತೊಡಗಿಸಲಾಗಿದೆ. ಸರ್ಕಾರದ ವ್ಯವಹಾರಗಳನ್ನು ಎಸ್.ಬಿ.ಎಂ ನಲ್ಲಿ ವ್ಯವಹರಿಸಬೇಕೆಂದು ಆದೇಶವಿರುವುದರಿಂದ ಹಾಗೂ ಜಿಲ್ಲಾಡಳಿತ ಭವನದಲ್ಲಿ ಎಸ್.ಬಿ.ಎಂ ಬ್ಯಾಂಕ್ ಮಾತ್ರ ಇರುವುದರಿಂದ ಹಿಂದಿನಂತೆಯೇ ಹೂಡಿಕೆಯನ್ನು ಎಸ್.ಬಿ.ಎಂ ಬ್ಯಾಂಕ್‌ನಲ್ಲಿ ಮಾಡಲಾಗಿದೆ ಹಾಗೂ ಹೂಡಿಕೆಯ ಮೇಲಿನ ಠೇವಣಿಗೆ ಟಿ.ಡಿ.ಎಸ್ ಅನ್ನು ವಸೂಲಿ ಮಾಡದೇ ಇರುವುದರಿಂದ ಸದರಿ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲಾಗಿದೆ.

ಈ ಕಛೇರಿ ಪತ್ರ ಸಂ:ಚಾರಾನಅಪ್ರಾ:ಠೇವಣಿ:2018–19 ದಿ:21–08–2018 ರಲ್ಲಿ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಚಾಮರಾಜನಗರ ಹಾಗೂ ಈ ಕಛೇರಿ ಪತ್ರ ಸಂ:ಚಾರಾನಅಪ್ರಾ:ಠೇವಣಿ:2018–19 ದಿ:21–08–2018 ರಲ್ಲಿ ವ್ಯವಸ್ಥಾಪಕರು, ಸಿಂಡಿಕೇಟ್

ಸಾಲಿನಿಂದ ಕಡಿತಗೊಳಿಸಿ ನವೀಕರಿಸಿ ಸುಮಾರು ರೂ.182687.00 ನಷ್ಟಕ್ಕೆ ಕಾರಣರಾಗಿರುತ್ತಾರೆ. ಆದುದರಿಂದ ಸಂಬಂಧಪಟ್ಟ ಬ್ಯಾಂಕಿನವರಿಂದ ಕಡಿತಗೊಂಡ ಟಿಡಿಎಸ್ ಮೊತ್ತವನ್ನು ಹಿಂಪಡೆಯಬೇಕಾಗಿ ಸೂಚಿಸಲಾಗಿದ್ದು, ಬ್ಯಾಂಕಿನವರಿಂದ ನಷ್ಟವಾದ ಮೊತ್ತವನ್ನು ವಸೂಲಿಸಿ ವರದಿಯನ್ನು ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಚಾಮರಾಜನಗರ ರವರಿಗೆ ಸಲ್ಲಿಸಲು ಸೂಚಿಸಿದೆ. ಮುಂದುವರಿದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೂಡಿಕೆ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಬಡ್ಡಿದರ ನೀಡುವ ರಾಷ್ಟ್ರೀಕೃತ ಬ್ಯಾಂಕುಗಳ ವಿವರ ಪಡೆದು ಹೆಚ್ಚು ಬಡ್ಡಿದರ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಮಾಡಬೇಕೆಂಬ ನಿಯಮವನ್ನು ಪಾಲಿಸುವಂತೆ ಸೂಚಿಸಲಾಗಿದೆ. 2017–18ನೇ ಸಾಲಿನಲ್ಲಿ ಠೇವಣಿ ತೊಡಗಿಸಿರುವ ವಿವರವನ್ನು ಅನುಬಂಧ –2ರಲ್ಲಿ ಲಗತ್ತಿಸಲಾಗಿದೆ.

ಅನುಬಂಧದಲ್ಲಿನ ವಿವರಗಳನ್ನು ಪರಿಶೀಲಿಸಲಾಗಿ ಹೂಡಿಕೆ ದಿನಾಂಕ:26.7.2018ರಲ್ಲಿ ಒಟ್ಟು ರೂ.8774140/–ಗಳನ್ನು ಹೂಡಿಕೆ ಮಾಡಿದ್ದು, ಬಡ್ಡಿದರ ಶೇ.6.40% ರಿಂದ ಶೇ.6.25ಕ್ಕೆ ಇಳಿಕೆಯಾಗಿದ್ದು, ಒಟ್ಟು ರೂ.13161.00 ಸಂಸ್ಥೆಗೆ ನಷ್ಟವಾಗಿರುತ್ತದೆ. ಅದೇ ರೀತಿ ಹೂಡಿಕೆ ದಿನಾಂಕ:25.7.2018ರಲ್ಲಿ ಒಟ್ಟು ರೂ.3344866/–ಗಳನ್ನು ಹೂಡಿಕೆ ಮಾಡಿದ್ದು, ಬಡ್ಡಿದರ ಶೇ.6.75% ರಿಂದ ಶೇ.6.70ಕ್ಕೆ ಇಳಿಕೆಯಾಗಿದ್ದು ಒಟ್ಟು ರೂ.1672.00 ಸಂಸ್ಥೆಗೆ ನಷ್ಟವಾಗಿರುತ್ತದೆ. ಒಟ್ಟು ರೂ.14833.00 ಸಂಸ್ಥೆಗೆ ನಷ್ಟವಾಗಿದ್ದು, ಈ ಬಗ್ಗೆ ಬ್ಯಾಂಕಿನೊಡನೆ ಪತ್ರ ವ್ಯವಹಾರ ನಡೆಸುವುದು ಇನ್ನು ಮುಂದೆ ದರಪಟ್ಟಿ ಪಡೆದು ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲು ಸೂಚಿಸಲಾಗಿದೆ.

## 9) ಮುಂದಿನ ಉಪಯೋಗಕ್ಕಾಗಿ ಖಾಲಿ ಉಳಿದಿರುವ ರಶೀತಿ ಪುಸ್ತಕಗಳ ವಿವರ:–

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದ್ದು ಲೆಕ್ಕತಪಾಸಣೆಯ ಪ್ರಾರಂಭ ದಿನಾಂಕ:16.08.2018 ರಂದು ರಶೀತಿ ಪುಸ್ತಕಗಳ ದಾಸ್ತಾವನ್ನು ಪರಿಶೀಲಿಸಲಾಗಿದ್ದು, ರಶೀತಿ ಪುಸ್ತಕ ಸಂಖ್ಯೆ 34 ರಿಂದ 70 ರವರೆಗೆ ಒಟ್ಟು 36 ರಶೀತಿ ಪುಸ್ತಕಗಳು ಮುಂದಿನ ಉಪಯೋಗಕ್ಕಾಗಿ ಖಾಲಿ ಉಳಿದಿದ್ದು ಭೌತಿಕವಾಗಿ ತಾಳೆಯಾಗಿರುತ್ತವೆ.

ಬ್ಯಾಂಕ್, ಚಾಮರಾಜನಗರ ಇವರಿಗೆ ಠೇವಣಿಯ ಬಡ್ಡಿಯಲ್ಲಿ ಆದಾಯ ತೆರಿಗೆಯನ್ನು ವಸೂಲಿ ಮಾಡಿದ್ದು, ಆದಾಯ ತೆರಿಗೆ ನಿಯಮ 1961ರ ನಿಯಮ 196ನೇ ರನ್ವಯ ಸರ್ಕಾರಿ ಸ್ವಾಮ್ಯದ ಉದ್ದೇಶಿತ ಠೇವಣಿಗಳ ಬಡ್ಡಿಯ ಮೇಲೆ ಆದಾಯ ತೆರಿಗೆ ಕಡಿತಗೊಳಿಸುವಂತಿಲ್ಲ. ಆದ್ದರಿಂದ ಕಡಿತಗೊಳಿಸಿರುವ ಆದಾಯ ತೆರಿಗೆ ಮೊಬಲಗನ್ನು ಠೇವಣಿಗೆ ಸೇರಿಸಲು ಪತ್ರ ಬರೆಯಲಾಗಿದೆ. (ಪ್ರತಿ ಲಗತ್ತಿಸಿದೆ). ಸದರಿ ಬ್ಯಾಂಕ್‌ನವರು ಅವರ ಕೇಂದ್ರ ಕಛೇರಿಗೆ ಪತ್ರ ಬರೆದು ವಸೂಲಿಸಿರುವ ಆದಾಯ ತೆರಿಗೆಯನ್ನು ಠೇವಣಿ ಲೆಕ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

| | | |
|---|---|---|
| ದಿನಾಂಕ: 01–04–2017ಕ್ಕೆ ಪ್ರಾರಂಭಿಕ ಶಿಲ್ಕು | = | 40 |
| 2017–18ನೇ ಸಾಲಿನ ಖರೀದಿ | = | – |
| **ಒಟ್ಟು** | = | 40 |
| 2017–18ನೇ ಸಾಲಿನ ಖರ್ಚು | = | 04 |
| ದಿನಾಂಕ: 31–3–2018ರ ಅಂತಿಮ ಶಿಲ್ಕು | = | 36 |

**10) ನಿವೇಶನ ಹಂಚಿಕೆಯ ಅರ್ಜಿಗಳ ದಾಸ್ತಾನು ಪರಿಶೀಲನೆ:–**

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದ್ದು ಲೆಕ್ಕತಪಾಸಣೆ ಪ್ರಾರಂಭ ದಿನಾಂಕದಂದು ನಾಗರೀಕ ಸೌಲಭ್ಯ ಹಂಚಿಕೆ ನಿಯಮಗಳು 1991ರ ಪ್ರಕಾರ ವಿತರಿಸಲಾಗುವ ಅರ್ಜಿಗಳಲ್ಲಿ ಅರ್ಜಿ ಸಂಖ್ಯೆ 0027 ರಿಂದ 0100ರವರೆಗೆ ಒಟ್ಟು 74 ಅರ್ಜಿಗಳು ಮುಂದಿನ ಉಪಯೋಗಕ್ಕಾಗಿ ಖಾಲಿ ಉಳಿದಿದ್ದು ಭೌತಿಕವಾಗಿ ತಾಳೆಯಾಗಿರುತ್ತದೆ.

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

**11) 2017–18ನೇ ಸಾಲಿನಲ್ಲಿ ಉಪಯೋಗಿಸಿದ ರಶೀತಿ ಪುಸ್ತಕಗಳ ವಿವರ:–**

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀತಿ ಸಂಖ್ಯೆ | ದಿನಾಂಕ |
|---|---|---|---|
| 1 | 30 | 2973–3000 | 4.4.2017 ರಿಂದ 20.5.2017 |
| 2 | 31 | 3001–3050 | 20.5.2017 ರಿಂದ 1.9.2017 |
| 3 | 32 | 3051–3100 | 7.9.2017 ರಿಂದ 30.1.2018 |
| 4 | 33 | 3101–3124 | 7.2.2018 ರಿಂದ 28.3.2018 |

**ಷರಾ : ರಶೀತಿ ಪುಸ್ತಕ ಸಂಖ್ಯೆ 33ನ್ನು 2017–18ನೇ ಸಾಲಿನಲ್ಲಿ ಭಾಗಶಃ (3124 ರಶೀದಿ ಸಂಖ್ಯೆ) ಪರಿಶೀಲಿಸಿದೆ.**

**12) ಮಾಹೆವಾರು ವಸೂಲಿ ಮತ್ತು ಜಮಾ ವಿವರ:–**

| ಕ್ರ.ಸಂ | ಮಾಹೆ | ವಸೂಲಿ | ಜಮಾ | ವ್ಯತ್ಯಾಸ |
|---|---|---|---|---|
| 1 | 4/2017 | 1743492.00 | 1743492.00 | – |
| 2 | 5/2017 | 503700.00 | 503700.00 | – |
| 3 | 6/2017 | 259180.00 | 259180.00 | – |
| 4 | 7/2017 | 236420.00 | 236420.00 | – |
| 5 | 8/2017 | 326440.00 | 326440.00 | – |
| 6 | 9/2017 | 262550.00 | 262550.00 | – |
| 7 | 10/2017 | 4710.00 | 4710.00 | – |
| 8 | 11/2017 | 323610.00 | 323610.00 | – |
| 9 | 12/2017 | 423969.00 | 423969.00 | – |
| 10 | 01/2018 | 566250.00 | 566250.00 | – |
| 11 | 02/2018 | 546150.00 | 546150.00 | – |
| 12 | 03/2018 | 900325.00 | 900325.00 | – |
| | **ಒಟ್ಟು** | **6096796.00** | **6096796.00** | – |

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

**13) ಅಂಚೆ ಚೀಟಿ ದಾಸ್ತಾನು:–**

ದಿನಾಂಕ: 01–04–2017ಕ್ಕೆ ಪ್ರಾರಂಭಿಕ ಶಿಲ್ಕು : 806.00

2017–18ನೇ ಸಾಲಿನ ಖರೀದಿ : 5000.00

**ಒಟ್ಟು** : 5806.00

2017–18ನೇ ಸಾಲಿನ ಬಳಕೆ : 5668.00

31.03.2018ಕ್ಕೆ ಅಂತಿಮ ಶಿಲ್ಕು : 138.00

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

## 14) ಉತ್ತಮತೆ ಶುಲ್ಕದ ಪಾವತಿ ಬಗ್ಗೆ:–

ಕರ್ನಾಟಕ ನಗರ ಮತ್ತು ಯೋಜನೆ ಕಾಯ್ದೆ 1961 ನಮೂನೆ–18ರ ಅನ್ವಯ ಪ್ರಾಧಿಕಾರದಲ್ಲಿ ಸಂಗ್ರಹಿಸಲಾದ ಒಟ್ಟು ಕೆಟಿಸಿಪಿ ಶುಲ್ಕದ ಶೇ.5ರಷ್ಟು ಮೊಬಲಗನ್ನು ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು ಇವರಿಗೆ ಆಯಾಯ ಆರ್ಥಿಕ ವರ್ಷದಲ್ಲಿಯೇ ಡಿ.ಡಿ ಮುಖಾಂತರ ಪಾವತಿಸಬೇಕಾಗಿರುತ್ತದೆ. 2014–16ರ ಸಾಲಿನ ಉತ್ತಮತೆ ಶುಲ್ಕ ರೂ.99935=00ನ್ನು ದಿನಾಂಕ:4.7.2016ರಂದು ಡಿಡಿ ಸಂಖ್ಯೆ: 506003ರಲ್ಲಿ ಪಾವತಿಸಲಾಗಿದ್ದು, 2016–17ನೇ ಸಾಲಿನಲ್ಲಿ ವಸೂಲಿಸಿದ ರೂ.208910.00ರ ಶೇ.5ರಷ್ಟು ಉತ್ತಮತೆ ಶುಲ್ಕದ ಅಂದರೆ ರೂ.10445.00ನ್ನು ದಿನಾಂಕ:30.8.2017ರಂದು ಚೆಕ್‌ಸಂಖ್ಯೆ: 168688ರಲ್ಲಿ ರೂ.10313.00ನ್ನು ಪಾವತಿಸಿರುತ್ತಾರೆ. 2017–18ನೇ ಸಾಲಿನಲ್ಲಿ ಉತ್ತಮತೆ ಶುಲ್ಕ ರೂ.528960.00ನ್ನು ವಸೂಲಿಸಿದ್ದು, ಶೇ.5% ಅಂದರೆ ರೂ.26448.00ನ್ನು ಕರ್ನಾಟಕ ನಗರಾ ಯೋಜನಾ ಮಂಡಳಿಗೆ ಪಾವತಿಸುವಂತೆ ಸೂಚಿಸಲಾಗಿದೆ.

**ಉತ್ತಮತೆ ಶುಲ್ಕದ ಡಿಸಿಬಿ :–**

| | |
|---|---|
| ದಿನಾಂಕ: 01–04–2017ಕ್ಕೆ ಪ್ರಾರಂಭಿಕ ಶಿಲ್ಕು | ರೂ. 10445=00 |
| 2017–18ನೇ ಸಾಲಿನ ಉತ್ತಮತೆ ಶುಲ್ಕ | ರೂ. 26448=00 |
| **ಒಟ್ಟು** | **ರೂ. 36893=00** |
| 2017–18ನೇ ಸಾಲಿನಲ್ಲಿ ಪಾವತಿಸಿರುವುದು | ರೂ. 10313=00 |
| ದಿನಾಂಕ: 31–3–2018ರ ಅಂತಿಮ ಶಿಲ್ಕು | ರೂ. 26580=00 |

## 15) ಸ್ಲಮ್ ಇಂಪ್ರುವ್‌ಮೆಂಟ್ ಸೆಸ್ ಪಾವತಿ ಬಗ್ಗೆ:–

ಸರ್ಕಾರದ ಆದೇಶ ಸಂಖ್ಯೆ ಸಂ.ಎಚ್.ಯು.ಡಿ. 180 ಎಂ.ಐ.ಪಿ 94 ದಿನಾಂಕ: 29.03.1994ರ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರಗಳು ನಿವೇಶನ ಮಂಜೂರಾತಿ ನೀಡುವ ಸಂದರ್ಭದಲ್ಲಿ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವಾಗ, ಕಟ್ಟಡ ಪರವಾನಗಿ ನೀಡುವ ಸಂದರ್ಭದಲ್ಲಿ ಸ್ಲಮ್ ಇಂಪ್ರುವ್‌ಮೆಂಟ್ ಸೆಸ್‌ನ್ನು ವಸೂಲಿ ಮಾಡಬೇಕಾಗಿರುತ್ತದೆ.

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು ಇವರಿಗೆ 2017–18ನೇ ಸಾಲಿನಲ್ಲಿ ರೂ.5,28,960/–ಗಳನ್ನು ಉತ್ತಮತೆ ಶುಲ್ಕ ಸಂಗ್ರಹಿಸಿದ ಬಾಬ್ತು ಅದರ ಶೇ.5 ರಷ್ಟು ರೂ.26,448/–ಗಳನ್ನು ಈ ಕಛೇರಿ ಪತ್ರ ಸಂ:ಚಾರಾನಅಪ್ರಾ/ಸಿ/ ಉ.ಶುಲ್ಕ ಶೇ.5/2018–19/132 ದಿ:24–09–2018 ರಲ್ಲಿ ಚೆಕ್ ಮುಖಾಂತರ ಕಳುಹಿಸಲಾಗಿದೆ. ಸದರಿ ಕಛೇರಿಯಿಂದ ಚೆಕ್ ಸ್ವೀಕರಿಸಿರುವುದಕ್ಕೆ ಸ್ವೀಕೃತಿ ಪತ್ರವನ್ನು ದಿ:05–10–2018 ರಂದು ಕಛೇರಿಗೆ ಕಳುಹಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

2017–18ನೇ ಸಾಲಿನಲ್ಲಿ ವಸೂಲಿಸಿದ ಸ್ಲಮ್ ಸೆಸ್ ರೂ.51,570/–ಗಳಿಗೆ ಶೇ.70% ರಷ್ಟಂತೆ ರೂ.36,099/–ಗಳ ಚೆಕ್ ಅನ್ನು (ಸಂ:119151 ದಿ:27–03–2019) ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರಿಗೆ ಕಳುಹಿಸಲಾಗಿದೆ. (ಪ್ರತಿ ಲಗತ್ತಿಸಿದೆ).

ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2016-17ನೇ ಸಾಲಿನಲ್ಲಿ ರೂ.19180=00 ಸ್ಲಮ್ ಇಂಪ್ರೂವ್‌ಮೆಂಟ್ ಸೆಸ್ ವಸೂಲಿಸಿದ್ದು, ಅದರಲ್ಲಿ ಶೇ.70ರಷ್ಟು ಅಂದರೆ ರೂ.13426.00ಗಳನ್ನು ದಿನಾಂಕ: 20.9.2017ರಂದು ಆಯುಕ್ತರು, ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರಿಗೆ ಪಾವತಿಸಿರುತ್ತಾರೆ. ಮುಂದುವರೆದಂತೆ 2017-18ನೇ ಸಾಲಿನಲ್ಲಿ ರೂ.51570.00ನ್ನು ಸ್ಲಮ್ ಇಂಪ್ರೂವ್‌ಮೆಂಟ್ ಸೆಸ್ ವಸೂಲಿಸಿದ್ದು, ಶೇ.70% ಅಂದರೆ ರೂ.36099.00ಗಳನ್ನು ಆಯುಕ್ತರು, ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರಿಗೆ ಪಾವತಿಸಲು ಸೂಚಿಸಿದೆ.

**16) ಪ್ರಾಧಿಕಾರದ ವಾಹನವನ್ನು ವಿಲೇ ಮಾಡುವ ಬಗ್ಗೆ:-**

ಚಾಮರಾಜನಗರ - ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ವಾಹನದ ಸಂಖ್ಯೆ KA -10 N-18 LMV CAR Ambassador ವಾಹನವು ತೀರಾ ಹಳೆಯದಾಗಿದ್ದು ಸಾರಿಗೆ ಆಯುಕ್ತರ ಸುತ್ತೋಲೆ ಸಂಖ್ಯೆ: ಸಾ.ಆ.ಎಸ್ ಅಂಡ್ ಡಿ.ಪಿ.ಆರ್ 251/96-97 ದಿನಾಂಕ: 22.08.1996 ರೀತ್ಯಾ ವಾಹನವು 14 ವರ್ಷಗಳಷ್ಟು ಹಳೆಯದಾಗಿದ್ದು ಸದರಿ ವಾಹನವನ್ನು ಬಿಡುಗೊಳಿಸಿ ಇದ್ದ ಸ್ಥಿತಿಯಲ್ಲಿಯೇ ಸರ್ಕಾರಿ ಬಹಿರಂಗ ಹರಾಜಿನ ಮೂಲಕ ವಿಲೇವಾರು ಮಾಡಲು ರೂ. 68000=00 ಕನಿಷ್ಟ ಮಾರುಕಟ್ಟೆ ಬೆಲೆಯನ್ನು ಆರ್‌ಟಿಓ ರವರು ನಿಗಧಿಗೊಳಿಸಿದ್ದು, ಟೆಂಡರ್/ಬಹಿರಂಗ ಹರಾಜು ಮೂಲಕ ವಿಲೇಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಇಲ್ಲವೇ ವಾಹನ ದಿನ ಕಳೆದಂತೆ ತುಂಬಾ ನಿಷ್ಕ್ರೀಯವಾಗಿ ಆರ್‌ಟಿಓ ರವರು ನಿಗಧಿಪಡಿಸಿದ ದರವು ಸಿಗದೇ ಸಂಸ್ಥೆಗೆ ನಷ್ಟವಾಗುವ ಸಂಭವವಿರುತ್ತದೆ.

**17) ಪ್ರಾಧಿಕಾರವು ಹೊಸ ವಾಹನವನ್ನು ಖರೀದಿಸಿರುವ ಬಗ್ಗೆ :-**

ಚಾಮರಾಜನಗರ - ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:28.2.2017ರ ಅಧೀನ ಕಾರ್ಯದರ್ಶಿಯವರ ಆದೇಶದನ್ವಯ ತೆರಿಗೆ ಹೊರತುಪಡಿಸಿ, 6.5 ಲಕ್ಷಕ್ಕೆ ಹೊಸ ವಾಹನವನ್ನು ಖರೀದಿಸಲು ಅನುಮೋದಿಸಲಾಗಿರುತ್ತದೆ. ಇದರ ಅನ್ವಯ ದಿನಾಂಕ:9.3.2017ರಂದು ದರಪಟ್ಟಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿರುತ್ತಾರೆ. 3 ಸಂಸ್ಥೆಗಳು ಮಹೀಂದ್ರಾ & ಮಹೀಂದ್ರಾ ಬೊಲೆರೋ ವಾಹನಕ್ಕೆ ದರಪಟ್ಟಿಯನ್ನು ಸಲ್ಲಿಸಿದ್ದು, ಕಡಿಮೆ ದರಪಟ್ಟಿಯನ್ನು ಸಲ್ಲಿಸಿದ್ದ ಮಹೀಂದ್ರಾ & ಮಹೀಂದ್ರಾ ಕಂಪನಿ, ಮೈಸೂರು ರವರಿಂದ ದಿನಾಂಕ:24.3.2017ರಂದು ರೂ.606190.00ಕ್ಕೆ ಬೊಲೆರೋ ಕಾರನ್ನು ಖರೀದಿಸಿರುತ್ತಾರೆ.

ಪ್ರಾಧಿಕಾರದ ವಾಹನ ಸಂ:ಕೆ.ಎ-10 ಎಮ್-18 ಅನ್ನು ರೂ.68,000/-ಗಳ ಕನಿಷ್ಠ ಮಾರುಕಟ್ಟೆ ಮೌಲ್ಯವನ್ನು ನಿಗಧಿಪಡಿಸಿದ್ದು, ಅದರಂತೆ, ಸದರಿ ವಾಹನವನ್ನು ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ದಿ:28-03-2018 ರಂದು ಬೆಳಿಗ್ಗೆ 11-00 ಗಂಟೆಗೆ ನಿಗಧಿಪಡಿಸಿದ್ದು, ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2018 ದಿ:27-03-2018 ರಂದು ಘೋಷಣೆಯಾದ ಪ್ರಯುಕ್ತ ನೀತಿ ಸಂಹಿತೆ ಜಾರಿಯಾದ ಕಾರಣದಿಂದ ಸದರಿ ಹರಾಜಿನ ದಿನಾಂಕವನ್ನು ಮುಂದೂಡಲಾಗಿದೆ. (ಪ್ರತಿ ಲಗತ್ತಿಸಿದೆ).

- ಯಾವುದೇ ಆಕ್ಷೇಪಣೆ ಇರುವುದಿಲ್ಲ -

ಮುಂದುವರೆದಂತೆ ಹೊಸ ವಾಹನಕ್ಕೆ ವಿಮಾ ಶುಲ್ಕ ರೂ.24394.00ಗಳನ್ನು ದಿನಾಂಕ:25.6.2017ರಂದು ಓರಿಯಂಟಲ್ ಇನ್ಸೂರೆನ್ಸ್ ಕಂಪನಿ ರವರಿಂದ ಪಡೆದುಕೊಂಡಿರುತ್ತಾರೆ. ದಿನಾಂಕ:7.6.2017ರಂದು ರಸ್ತೆ ತೆರಿಗೆಯ ಮೊತ್ತ ರೂ.94205.00ನ್ನು ಆರ್‌ಟಿಓ ಕಛೇರಿಗೆ ಪಾವತಿಸಿರುತ್ತಾರೆ. ಇದರಿಂದಾಗಿ ಹಿಂದೆ ಇದ್ದ ಹೊರಗುತ್ತಿಗೆ ಆಧಾರದ ವಾಹನವನ್ನು ರದ್ದುಗೊಳಿಸಿದ್ದು, ಅವರಿಗೆ ಎಲ್ಲಾ ಬಾಬ್ತುಗಳನ್ನು ಪಾವತಿಸಲಾಗಿರುತ್ತದೆ.

ಹೊಸ ವಾಹನದ ಸಂಖ್ಯೆ: ಕೆಎ–10 4242 ಬೊಲೆರೋದ ಲಾಗ್ ಪುಸ್ತಕವನ್ನು ಪರಿಶೀಲಿಸಿದ್ದು, ಡಿಸಿಬಿ ವಿವರ ಕೆಳಕಂಡಂತಿರುತ್ತದೆ.

| | |
|---|---|
| ದಿನಾಂಕ: 01–04–2017ಕ್ಕೆ ಪ್ರಾರಂಭಿಕ ಶಿಲ್ಕು | = ನಿಲ್ |
| 2017–18ನೇ ಸಾಲಿನಲ್ಲಿ ಇಂಧನ ಖರೀದಿ | = 1705 ಲೀ |
| **ಒಟ್ಟು** | = 1705 ಲೀ |
| 2017–18ನೇ ಸಾಲಿನ ಬಳಕೆಯಾದ ಇಂಧನ | = 1705 ಲೀ |
| 31.03.2018 ಕ್ಕೆ ಅಂತಿಮ ಶಿಲ್ಕು (ಇಂಧನ) | = 2.7 ಲೀ |

ಈ ವಾಹನವನ್ನು ಖರೀದಿಸಿದಾಗ ವಾಹನವು 1168 ಕಿ.ಮೀನಲ್ಲಿ ಓಡಿದ್ದು, ದಿನಾಂಕ:31.3.2018ರಂದು 18191 ಕಿ.ಮೀ ಎಂದು ಮೀಟರ್‌ನಲ್ಲಿ ನಮೂದಾಗಿರುತ್ತದೆ. ಅಂದರೆ 17023 ಕಿ.ಮೀ ನಷ್ಟು 2017–18ನೇ ಸಾಲಿನಲ್ಲಿ ಓಡಿಸಲಾಗಿದ್ದು, ಪ್ರತಿ ಲೀಟರ್‌ಗೆ 10 ಕಿ.ಮೀ ನಷ್ಟು ಮೈಲೇಜ್ ನೀಡುತ್ತಿರುತ್ತದೆ ಎಂದು ತಿಳಿಸಿರುತ್ತಾರೆ.

## 18) ಮುಂಗಡಗಳು:–

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕತಪಾಸಣೆಯನ್ನು ಕೈಗೊಳ್ಳಲಾಗಿದ್ದು, ಲೆಕ್ಕ ತಪಾಸಣೆಗೆ ಮುಂಗಡ ವಹಿಯನ್ನು ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ ಕಡತಗಳನ್ನು ಪರಿಶೀಲಿಸಲಾಗಿ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಚಾಮರಾಜನಗರ ಇವರಿಗೆ ಚಾಮರಾಜನಗರ ತಾಲ್ಲೂಕು ಯಡಪುರ ಗ್ರಾಮದಲ್ಲಿರುವ ಸರ್ಕಾರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಟ್ಟಡದ ಹತ್ತಿರ ಬಸ್ ನಿಲ್ದಾಣವನ್ನು ನಿರ್ಮಿಸುವ ಸಂಬಂಧ ಚೆಕ್ ಸಂಖ್ಯೆ: 775928 ದಿನಾಂಕ: 03.12.2016 ರಲ್ಲಿ 2,20,000=00 ಮತ್ತು ಚೆಕ್ ಸಂಖ್ಯೆ: 775949 ದಿನಾಂಕ: 28.01.2017 ರಲ್ಲಿ 2,20,000=00 ಒಟ್ಟು

2017–18ನೇ ಸಾಲಿನಲ್ಲಿ ನಿರ್ಮಿತಿ ಕೇಂದ್ರ, ಚಾಮರಾಜನಗರ ಇವರಿಗೆ ರೂ.4,54,000/–ಗಳನ್ನು ಬೋರ್‌ವೆಲ್ ನಿರ್ಮಾಣಕ್ಕಾಗಿ ಮತ್ತು ಉದ್ಯಾನವನದ ಅಭಿವೃದ್ಧಿ ಹಾಗೂ ಕೆ.ಆರ್.ಐ.ಡಿ.ಎಲ್, ಚಾಮರಾಜನಗರ ಇವರಿಗೆ ಕಛೇರಿ ಕಟ್ಟಡ ನಿರ್ಮಾಣ ಸಂಬಂಧ ರೂ.40,00,000/–ಗಳನ್ನು ನೀಡಲಾಗಿರುತ್ತದೆ. ಈ ಸಂಬಂಧ ನಿರ್ಮಿತಿ ಕೇಂದ್ರ, ಚಾಮರಾಜನಗರ ಇವರಿಗೆ ಈ ಕಚೇರಿ ಪತ್ರ ಸಂ:ಚಾರಾನಅಪ್ರಾ/ದಾಖಲಾತಿ/2017–18/174 ದಿ:14–07–2017 ಮತ್ತು ಸಂ:ಚಾರಾನಅಪ್ರಾ/ಉದ್ಯಾನವನ/2017–18/412 ದಿ:05–02–2018

ರೂ.440000=00ಗಳನ್ನು ನೀಡಿರುತ್ತಾರೆ. ಹಾಗೂ ಚಾಮರಾಜನಗರ ಟೌನ್ ಸೋಮವಾರ ಪೇಟೆ ಇಲಿಯಾಸ್ ನಗರ ಇಲ್ಲಿ ಸಾರ್ವಜನಿಕರ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಬೋರ್‌ವೆಲ್ ನಿರ್ಮಾಣ ಕಾಮಗಾರಿ ಸಂಬಂಧ ಅಂದಾಜು ಮೊತ್ತದ ಬಾಕಿ ಶೇ.50 ರಷ್ಟನ್ನು ದಿನಾಂಕ: 03.12.2016 ರಂದು ಚೆಕ್‌ಸಂಖ್ಯೆ:775929 ರಲ್ಲಿ ರೂ.231500=00ಗಳನ್ನು ಮತ್ತು ಉದ್ಯಾನವನ ಅಭಿವೃದ್ಧಿಗೆ ರೂ.222500.00 ಅಂದರೆ ಒಟ್ಟು ರೂ.454000.00ಗಳನ್ನು ನೀಡಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ:7.12.2016ರಂದು ಬೋರ್‌ವೆಲ್‌ಗೆ ಉಳಿದ ಶೇ.50ರ ಮೊತ್ತ ಅಂದರೆ ರೂ.231500.00ಗಳನ್ನು ಬಿಡುಗಡೆಗೊಳಿಸಿರುತ್ತಾರೆ. ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯ ಸ್ವಂತ ಕಟ್ಟಡ ನಿರ್ಮಾಣ ಸಂಬಂಧ ಅಂದಾಜು ಮೊತ್ತದ ಶೇ.50ರಷ್ಟು ಮೊಬಲಗನ್ನು ದಿನಾಂಕ:7.10.2016ರಂದು ಚೆಕ್‌ಸಂಖ್ಯೆ:566043ರಲ್ಲಿ ರೂ.4919000.00ಗಳನ್ನು ಕೆಆರ್‌ಐಡಿಎಲ್, ಚಾಮರಾಜನಗರ ರವರಿಗೆ ನೀಡಲಾಗಿರುತ್ತದೆ. ಮುಂದುವರೆದಂತೆ ದಿನಾಂಕ:29.12.2017ರಂದು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಪ್ರಾಧಿಕಾರದ ಕಛೇರಿಯ ಕಟ್ಟಡ ಕಾಮಗಾರಿ ನೆಲ ಮಹಡಿಯ ಛಾವಣಿಯಾಗಿರುವುದರಿಂದ ಉಳಿಕೆ ಹಣದ 4919000.00ಗಳಲ್ಲಿ 4000000.00ವನ್ನು ದಿನಾಂಕ:23.1.2018ರಂದು ಚೆಕ್‌ಸಂಖ್ಯೆ:168732ರಲ್ಲಿ ಕೆಆರ್‌ಐಡಿಎಲ್ ರವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

| | |
|---|---|
| ದಿನಾಂಕ: 01-04-2017ಕ್ಕೆ ಪ್ರಾರಂಭಿಕ ಶಿಲ್ಕು | ರೂ. 6524500.00 |
| 2017-18ನೇ ಸಾಲಿನ ಮುಂಗಡ ನೀಡಿರುವುದು | ರೂ. 4454000.00 |
| **ಒಟ್ಟು** | **ರೂ. 10978500.00** |
| 2017-18ನೇ ಸಾಲಿನಲ್ಲಿ ಹೊಂದಾಣಿಕೆ ಮಾಡಿರುವುದು | ರೂ. - |
| ದಿನಾಂಕ: 31-3-2018ರ ಬಾಕಿ | ರೂ. 10978500.00 |

**ಷರಾ:-**3.12.2016ರ ಚೆಕ್‌ಸಂಖ್ಯೆ:775929ರಲ್ಲಿ ರೂ.231500.00ಗಳನ್ನು ಬಿಡುಗಡೆಗೊಳಿಸಿದ್ದು, 2016-17ನೇ ಸಾಲಿನಲ್ಲಿ ರೂ.231500.00 ಸೇರ್ಪಡೆಯಾಗದ ಕಾರಣ 2017-18ರ ಸಾಲಿನ ಮೊತ್ತಕ್ಕೆ ಒಟ್ಟು ರೂ.454000.00ಗಳನ್ನು [231500+222500] ಸೇರಿಸಲಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಪಟ್ಟಂತೆ Work completion report , Third party inspection report, Utilization certificate, M.B, ಕಾಮಗಾರಿಯ ವಿವಿಧ ರಲ್ಲಿ ದಾಖಲಾತಿಗಳನ್ನು ಕಳುಹಿಸುವಂತೆ ಪತ್ರ ಬರೆಯಲಾಗಿದೆ. (ಪತ್ರದ ಪ್ರತಿ ಲಗತ್ತಿಸಿದೆ) ಕಛೇರಿ ಕಟ್ಟಡದ ನಿರ್ಮಾಣವನ್ನು ಕೆ.ಆರ್.ಐ.ಡಿ.ಎಲ್, ಚಾಮರಾಜನಗರ ಇವರು ನಿರ್ಮಿಸುತ್ತಿದ್ದು, ಕಟ್ಟಡ ಪೂರ್ಣಗೊಂಡಿರುವುದಿಲ್ಲ. ಕಟ್ಟಡ ಪೂರ್ಣಗೊಂಡ ನಂತರ ಸಂಬಂಧಿಸಿದ ದಾಖಲಾತಿಗಳನ್ನು ಪಡೆಯಲಾಗುವುದು.

ಭಾವಚಿತ್ರಗಳನ್ನು ಪರಿಶೀಲನೆಗೆ ಒದಗಿಸುವವರೆಗೆ 2017–18ನೇ ಸಾಲಿನಲ್ಲಿ ಮುಂಗಡ ನೀಡಿರುವ ಒಟ್ಟು ರೂ. 4454000.00 [4000000+454000]ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ನಿರ್ಮಿತಿ ಕೇಂದ್ರ ರೂ. 454000.00

| | |
|---|---|
| ಕೆಆರ್‌ಐಡಿಎಲ್ | ರೂ. 4000000.00 |
| **ಒಟ್ಟು** | **ರೂ. 4454000.00** |

## 19) ಪ್ರಾಧಿಕಾರದ ಕಛೇರಿಯ ಸ್ವಂತ ಕಟ್ಟಡ ನಿರ್ಮಾಣದ ಬಗ್ಗೆ:–

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸ್ವಂತ ಕಟ್ಟಡದ ನಿರ್ಮಾಣ ಸಂಬಂಧ ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಗ್ರಾಮದ ಸ.ನಂ 301/1ಎ, 302/2ಎ, 32ಬಿ/ಎ 1ಬಿ ನಲ್ಲಿ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ನಾಗರೀಕ ಸೌಲಭ್ಯ ನಿವೇಶನದಲ್ಲಿ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸಲು ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅಂದಾಜು ಪಟ್ಟಿಯನ್ನು ರೂ. 98.38 ಲಕ್ಷಗಳಿಗೆ ಸಿದ್ದಪಡಿಸಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು ಇವರ ಪತ್ರದ ಸಂಖ್ಯೆ: ಕಾ.ಪಾ.ಇಂ./ಲೋಜ ಲ.ಬ.ಸ/ಚಾ–ನಗರ/ತಾ.ಪ ಸ.ಇಂ– 1/2015–16 / 5161–62, ದಿನಾಂಕ: 31.12.2015 ರಲ್ಲಿ ರೂ. 98.38 ಲಕ್ಷಗಳ ಅಂದಾಜು ಪಟ್ಟಿಗೆ ( 2014–15 ನೇ ಸಾಲಿನ ಎಸ್.ಆರ್ ದರದಂತೆ) ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ.

ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಸಂಖ್ಯೆ: ಚಾಜಿನಕೋ/ಇತರೆ/ಸಿ.ಆರ್/341/2015–16, ದಿನಾಂಕ:03.05.2016ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ, ಮುಂದುವರಿದು ದಿನಾಂಕ: 21.06.2016ರಲ್ಲಿ ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (5) ರಲ್ಲಿ ಸದರಿ ಕಾಮಗಾರಿಯನ್ನು KRIDL ಸಂಸ್ಥೆಗೆ ವಹಿಸುವ ಸಂಬಂಧ ತೀರ್ಮಾನಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ರವರ ಪತ್ರಸಂಖ್ಯೆ: ಚಾಜಿನಕೋ/ಇತರೆ/ಸಿ.ಆರ್/341/2015–16 ದಿನಾಂಕ: 27.06.2016 ರಲ್ಲಿ ಸದರಿ ಕಾಮಗಾರಿಯನ್ನು KRIDL ಸಂಸ್ಥೆಗೆ ವಹಿಸುವುದಕ್ಕೆ ಅನುಮತಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು KRIDL ಸಂಸ್ಥೆ ಚಾಮರಾಜನಗರ ರವರಿಗೆ ವಹಿಸಿದ ನಂತರ KRIDL ಚಾಮರಾಜನಗರ ಮತ್ತೊಮ್ಮೆ 2015–16ನೇ ಸಾಲಿನ ಎಸ್.ಆರ್ ದರದಂತೆ ಅಂದಾಜು ಪಟ್ಟಿ ತಯಾರಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ, ಮತ್ತು ಆಡಳಿತಾತ್ಮಕ

ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಾಣ ಹಂತದಲ್ಲಿದ್ದು, ಪೂರ್ಣಗೊಂಡಿರುವುದಿಲ್ಲ. ಸದರಿ ಕಟ್ಟಡವನ್ನು ಹಸ್ತಾಂತರಿಸಿಕೊಂಡಾಗ ಸಂಸ್ಥೆಗೆ ನಷ್ಟವಾದರೆ ಕೆ.ಆರ್.ಐ.ಡಿ.ಎಲ್, ಚಾಮರಾಜನಗರ ಇವರಿಂದ ವಸೂಲಿ ಮಾಡಲಾಗುವುದು.

ಅನುಮೋದನೆ ಪಡೆದುಕೊಂಡಿರುವುದಿಲ್ಲ. ಸದರಿ KRIDL ಚಾಮರಾಜನಗರ ರವರು ತಯಾರಿಸಿರುವ ಅಂದಾಜು ಪಟ್ಟಿಗೆ, ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ಪಡೆದಿದ್ದು, ಸದರಿ ಕೆಆರ್‌ಐಡಿಎಲ್ ಚಾಮರಾಜನಗರ ರವರು ತಯಾರಿಸಿರುವ ಅಂದಾಜು ಪಟ್ಟಿಗೆ ಪಡೆದುಕೊಂಡು ದಿನಾಂಕ:7.10.2016ರಂದು KRIDL ಚಾಮರಾಜನಗರ ಮತ್ತು ಚಾಮರಾಜನಗರ – ರಾಮಸಮುದ್ರ ಪ್ರಾಧಿಕಾರದ ಚಾಮರಾಜನಗರ ರವರು ಒಪ್ಪಿಗೆ ಸೂಚಿಸಿ ಕರಾರು ಪತ್ರಕ್ಕೆ ಸಿದ್ಧಪಡಿಸಿ ಸಹಿ ಮಾಡಿರುತ್ತಾರೆ. ಈ ಸಂಬಂಧ ಕಾಮಗಾರಿಯ ಅಂದಾಜು ಮೊತ್ತದ ಶೇ 50 ರಷ್ಟು ಮೊಬಲಗು ರೂ. 49,90,000=00 ಗಳನ್ನು ದಿನಾಂಕ: 07.10.2016 ಚೆಕ್ ಸಂಖ್ಯೆ 566043 ರಲ್ಲಿ KRIDL ಚಾಮರಾಜನಗರ ರವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ:23.1.2018ರ ಪತ್ರದ ಸಂಖ್ಯೆ: ಚಾರಾನಅಪ್ರಾ/ ಸ್ವ.ಕ.ನಿ/ 2017-18/ 396ರನ್ವಯ ದಿನಾಂಕ:29.12.2017ರ ಪ್ರಾಧಿಕಾರದ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸುವಾಗ, ಪ್ರಾಧಿಕಾರ ಕಛೇರಿಯ ಕಟ್ಟಡ ಕಾಮಗಾರಿ ನೆಲಮಹಡಿಯ ಛಾವಣಿವರೆಗೆ ಆಗಿರುವುದು ಕಂಡುಬಂದಿರುತ್ತದೆ. ಆದುದರಿಂದ ಉಳಿಕೆ ಹಣ ರೂ.49.19ಲಕ್ಷಗಳ ಪೈಕಿ 40.00 ಲಕ್ಷಗಳನ್ನು ಮಾತ್ರ ಬಿಡುಗಡೆಗೊಳಿಸಲು ಹಾಗೂ ಉಳಿದ ರೂ.9.19 ಲಕ್ಷಗಳನ್ನು ಕಾಮಗಾರಿ ಪೂರ್ಣಗೊಳಿಸಿದ ನಂತರ ಬಿಡುಗಡೆಗೊಳಿಸಲು ತೀರ್ಮಾನಿಸಿ ದಿನಾಂಕ:23.1.2018ರಂದು ಚೆಕ್‌ಸಂಖ್ಯೆ: 168732ರಲ್ಲಿ ರೂ.40.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ವಿವರಗಳನ್ನು ಪರಿಶೀಲಿಸಲಾಗಿ ಒಟ್ಟು ರೂ.89,90,000/-ಗಳನ್ನು ಈಗಾಗಲೇ ಸಂದಾಯ ಮಾಡಲಾಗಿದ್ದು, ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಹಾಗೂ ದೀರ್ಘಾವಧಿ ಕಾಮಗಾರಿ ನಡೆದಿದ್ದು, ಮುಂದೆ ಸಂಸ್ಥೆಗೆ ನಷ್ಟವಾದರೇ ಕೆಆರ್‌ಐಡಿಎಲ್ ರವರಿಂದ ವಸೂಲಿ ಮಾಡಲು ಸೂಚಿಸಲಾಗಿದೆ.

## 20] ನ್ಯಾಯಾಲಯದ ಪ್ರಕರಣಗಳು :-

ಚಾಮರಾಜನಗರ ರಾಮಸಮುದ್ರ ಪ್ರಾಧಿಕಾರದ 2017-18ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದ್ದು, ನ್ಯಾಯಾಲಯದ ಪ್ರಕರಣಗಳ ವಿವರವನ್ನು ಪರಿಶೀಲಿಸಿದಾಗ ಒಟ್ಟು 07 ಪ್ರಕರಣಗಳು ವಿಲೇಯಾಗದೇ ಉಳಿದಿದ್ದು, ತ್ವರಿತವಾಗಿ ವಿಲೇ ಮಾಡಲು ಸೂಚಿಸಲಾಗಿರುತ್ತದೆ. ನ್ಯಾಯಾಲಯದ ಪ್ರಕರಣದ ವಿವರಗಳನ್ನು ಅನುಬಂಧ-3ರಲ್ಲಿ ಲಗತ್ತಿಸಲಾಗಿರುತ್ತದೆ.

- ಯಾವುದೇ ಆಕ್ಷೇಪಣೆ ಇರುವುದಿಲ್ಲ -

**21) ಮಹಾ ಯೋಜನೆ (ಪರಿಷ್ಕೃತ)–2 ಟೆಂಡರ್ ಪ್ರಕ್ರಿಯೆಯು ವಿಳಂಬವಾಗುತ್ತಿರುವ ಬಗ್ಗೆ:–**

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣೆ ಕೈಗೊಂಡಿದ್ದು, ಮಹಾ ಯೋಜನೆ (ಪರಿಷ್ಕೃತ) 2 ಕಡತವನ್ನು ಪರಿಶೀಲಿಸಲಾಗಿ, ದಿನಾಂಕ: 21.06.2017 ರಂದು ಟೆಂಡರ್ ಪ್ರಕಟಣೆಗೆ ಆದೇಶವನ್ನು ಹೊರಡಿಸಿದ್ದು, ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗಿರುತ್ತದೆ. ಅದರಂತೆ ಕನಿಷ್ಟ 3 ಪಟ್ಟಣಗಳಿಗೆ ಮಾಸ್ಟರ್‌ಪ್ಲಾನ್ ತಯಾರಿಸಿರುವ ಅನುಭವವಿರುವ ಅರ್ಹ ಸಂಸ್ಥೆಗಳಿಂದ ದರ ಪಟ್ಟಿಯನ್ನು ಮತ್ತು ಇ.ಎಂ.ಡಿ ಮೊತ್ತ ರೂ. 25000=00 ಬೇಡಿಕೆ ಹುಂಡಿಯನ್ನು 10 ದಿನಗಳ ಒಳಗೆ ಆಯುಕ್ತರಿಗೆ ಸಲ್ಲಿಸಲು ಕೋರಲಾಗಿರುತ್ತದೆ. ಮತ್ತು ದರಪಟ್ಟಿ ಸಲ್ಲಿಸಲು 03.07.2017 ರಂದು ಮಧ್ಯಾಹ್ನ 4:30 P.M. ಕೊನೆ ದಿನವೆಂದು ಪ್ರಕಟಣೆಯಲ್ಲಿ ತಿಳಿಸಲಾಗಿರುತ್ತದೆ.

ದಿನಾಂಕ: 30.06.2017 ರಂದು Center for Syboaiess of Technology, Envirornment & Management (STEM) ರವರು ತಾಂತ್ರಿಕ ಪ್ರಸ್ತಾವನೆಯನ್ನು ಮತ್ತು ದರಪಟ್ಟಿಯನ್ನು ರೂ. 14.40000=00 ಗಳಿಗೆ ಸಲ್ಲಿಸಿರುತ್ತಾರೆ. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನ 03.07.2017 ರ ವರೆಗೆ ಬೇರೆ ಯಾವ ಸಂಸ್ಥೆಯು ದರಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ಮುಂದುವರೆದಂತೆ ದಿನಾಂಕ: 22.07.2017 ರಂದು ದರಪಟ್ಟಿಯ ಆಧಾರದ ಮೇಲೆ STEM ಸಂಸ್ಥೆಯನ್ನು ಪ್ರಾಧಿಕಾರದ ಸಾಮಾನ್ಯ ಸಭೆಯ ಮೂಲಕ ಆಯ್ಕೆ ಮಾಡಿದ್ದು, ರೂ. 12,40000=00 ( ತೆರಿಗೆ ಹೊರತು ಪಡಿಸಿ) ಪರಿಷ್ಕ್ರತ ದರಪಟ್ಟಿಗೆ ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದವರು ಮತ್ತು STEM ಸಂಸ್ಥೆಯವರು ಒಪ್ಪಿಗೆ ಸೂಚಿಸಿರುತ್ತಾರೆ. ಸದರಿ ಸಂಸ್ಥೆಗೆ ಮಹಾ ಯೋಜನೆ – 2ನ್ನು ತಯಾರಿಸಲು ಕಾರ್ಯಾದೇಶವನ್ನು ನೀಡಿರುತ್ತಾರೆ.

ಒಪ್ಪಂದದ ಅನುಸಾರ 11.08.2017 ರಂದು STEM ರವರು ಯೋಜನೆಯ ಒಟ್ಟು ಮೊತ್ತದ ಶೇ 10 ರಷ್ಟಕ್ಕೆ +18% ಸರಕು ಸೇವಾ ಶುಲ್ಕಕ್ಕೆ ಒಟ್ಟು ರೂ 146320 ಕ್ಕೆ Tax Invoice ನ್ನು ಪಾವತಿಗಾಗಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ದಿನಾಂಕ: 12.09.2017 ರಂದು ಒಪ್ಪಂದ ಅನುಸಾರ 2ನೇ ಕಂತಿನ ಬಾಬ್ತು ಮತ್ತು ಸರಕು ಸೇವಾ ಶುಲ್ಕವನ್ನು ಸೇರಿಸಿ ಒಟ್ಟು 146320=00 (124000+22320) ಪಾವತಿಸಲು STEM ರವರು Tax Invoice ನ್ನು ಸಲ್ಲಿಸಿರುತ್ತಾರೆ. ದಿನಾಂಕ: 13.09.2017 ರಂದು ಮಹಾ ಯೋಜನೆ (ಪರಿಷ್ಕ್ರತ) – 2 ಯೋಜನಾ ಮೊತ್ತದ 2 ಕಂತುಗಳ ಬಾಬ್ತು ರೂ. 2,48,000=00 ಗಳಿಗೆ ಚೆಕ್ ಸಂಖ್ಯೆ – ಮಹಾಯೋಜನೆ (ಪರಿಷ್ಕೃತ–2ನ್ನು) STEM, ಬೆಂಗಳೂರು ಇವರು ತಯಾರಿಸುತ್ತಿದ್ದು, ಲೆಕ್ಕ ವರದಿಯಲ್ಲಿ ತಿಳಿಸಿದಂತೆ ಆದಾಯ ತೆರಿಗೆ 2.26% ಮತ್ತು ಕಾರ್ಮಿಕ ಕಲ್ಯಾಣ ನಿಧಿಗೆ ಶೇ.1% ರಷ್ಟು ಕಡಿತಗೊಳಿಸಿರುವುದಿಲ್ಲ. ಅದರ ಬಾಬ್ತು ರೂ.24,385/–ಗಳನ್ನು ಮುಂದಿನ ಹಂತದಲ್ಲಿ ಬಿಡುಗಡೆಯಾಗುವ ಮೊಬಲಗಿನಲ್ಲಿ ವಸೂಲಿ ಮಾಡಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ಮುಂದಿನ ಲೆಕ್ಕ ತಪಾಸಣೆಯಲ್ಲಿ ಚಲನ್ ಪ್ರತಿಯನ್ನು ಸಲ್ಲಿಸಲಾಗುವುದು.

168694 ರಲ್ಲಿ ಪಾವತಿಸಿದ್ದು ಜಿ.ಎಸ್.ಟಿ ಮೊತ್ತವನ್ನು ಪಾವತಿಸಿರುವುದಿಲ್ಲ. ಮುಂದುವರೆದಂತೆ STEM ರವರು ಒಪ್ಪಂದದ ಅನುಸಾರ 3, 4,5, 6ನೇ ಕಂತಿನ ಬಾಬ್ತು ಯೋಜನಾ ಮೊತ್ತ ಶೇ 65 ರಷ್ಟು ಅಂದರೆ ರೂ. 8,06,000=00 ಮತ್ತು ಸರಕು ಸೇವಾ ಶುಲ್ಕ 145080=00 ಗಳಿಗೆ ಒಟ್ಟು ರೂ. 951080=00 ಗಳಿಗೆ Tax Invoice ನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ದಿನಾಂಕ: 07.03.2018 ರಂದು ಪ್ರಾಧಿಕಾರದವರು 64ನೇ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ 500000=00 ಗಳನ್ನು ಪಾವತಿಸಲು ಅನುಮೋದಿಸಿರುತ್ತಾರೆ. ಅದರ ಅನುಸಾರ ಚೆಕ್ ಸಂಖ್ಯೆ 168742 ರಲ್ಲಿ ದಿನಾಂಕ: 07.03.2018 ರಂದು ಪಾವತಿಸಲಾಗಿರುತ್ತದೆ.

ದಿನಾಂಕ: 13.03.2018 ರಂದು STEM ರವರು ಪತ್ರದ ಅನುಸಾರ ಶೇ 75% ರಷ್ಟು ಮಹಾಯೋಜನೆ –2ರ ಕೆಲಸ ಪೂರ್ಣಗೊಂಡಿದ್ದು, ದಿನಾಂಕ: 31.01.2018 ರಂದು ಕರಡು ಯೋಜನಾ ಪ್ರತಿಯನ್ನು ಸರ್ಕಾರದ ಒಪ್ಪಗೆಗೆ ಸಲ್ಲಿಸಲಾಗಿರುತ್ತದೆ. ಆದರೆ ಇಲ್ಲಿಯವರೆವಿಗೂ ಸರ್ಕಾರದಿಂದ ಯಾವುದೇ ಅನುಮೋದನೆ ಆದೇಶವನ್ನು ನೀಡಿರುವುದಿಲ್ಲ. ಪ್ರಾಧಿಕಾರ ಮತ್ತು STEM ಸಂಸ್ಥೆ ಒಪ್ಪಂದದ ಅನುಸಾರ ಮಹಾ ಯೋಜನೆ (ಪರಿಷ್ಕೃತ) – 2 ಗೆ ನಿಗಧಿಪಡಿಸಿರುವ 07 ತಿಂಗಳ ಕಾಲಾವದಿ ಅಂದರೆ 28.07.2017 ರಿಂದ 28.02.2018 ರ ವರಗೆ ಅಥವಾ ಪ್ರಾಧಿಕಾರ ಮತ್ತು STEM ಸಂಸ್ಥೆಯವರು ಬರವಣಿಗೆ ಮುಖೇನ ಸೂಚಿಸಿದ ಮುಂದಿನ ದಿನಾಂಕದವರೆಗೆ ಎಂದು ನಮೂದಿಸಿದ್ದು 28.02.2018 ನಂತರವು ಯೋಜನೆಯ ಇಲ್ಲಿಯವರೆಗೂ ಮುಂದುವರೆದಿರುತ್ತದೆ.

ಒಪ್ಪಂದದ Attachment –B ಅನುಸಾರ ತಾತ್ಕಾಲಿಕ ಮಹಾ ಯೋಜನೆಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಸರ್ಕಾರದಿಂದ ಯಾವುದೇ ಅನುಮತಿ ಆದೇಶ ಇಲ್ಲಿಯವರೆಗೆ ನೀಡಿರುವುದಿಲ್ಲ. ಇದರಿಂದಾಗಿ STEM ಸಂಸ್ಥೆಯವರು ಮುಂದಿನ ಹಂತದ ಕಾರ್ಯವನ್ನು ಮುಕ್ತಾಯಗೊಳಿಸುವಲ್ಲಿ ವಿಳಂಬವಾಗುತ್ತಿದ್ದು ಅದಷ್ಟು ತ್ವರಿತವಾಗಿ ಸರ್ಕಾರದ ಅನುಮತಿಯನ್ನು ಪಡೆದುಕೊಂಡು ಮುಕ್ತಾಯಗೊಳಿಸಲು ಸೂಚಿಸಿದೆ. ಕಾಲಾವಧಿ ವಿಸ್ತರಣೆಯಿಂದಾಗಿ ಮುಂದೆ ಆಗುವ ಅಧಿಕ ವೆಚ್ಚಕ್ಕೆ ಪ್ರಾಧಿಕಾರವೇ ನೇರ ಹೊಣೆಯಾಗಿರುತ್ತದೆ.

STEM ಸಂಸ್ಥೆಯವರು ಸಲ್ಲಿಸಿರುವ Tax Invoice ಗೆ ಪಾವತಿಸಿರುವ ಮೊತ್ತದ ಮೇಲೆ ಆದಾಯ ತೆರಿಗೆ 2.26% ಮತ್ತು ಕಾರ್ಮಿಕ ಕಲ್ಯಾಣ ನಿಧಿಗೆ ಶೇ 1%ನ್ನು ಕಡಿತಗೊಳಿಸಿರುವುದಿಲ್ಲ. ಒಟ್ಟು ಮೊತ್ತ ರೂ 24385=00 ಮುಂದಿನ ಹಂತದಲ್ಲಿ ಬಿಡುಗಡೆಗೊಳಿಸುವ ವೇಳೆ STEM ಸಂಸ್ಥೆಯವರಿಂದ ವಸೂಲಿಸಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಲಾಗಿದೆ.

**22) ಹೊಸ ಬಡಾವಣೆಗಳ ಮೇಲೆ ಉತ್ತಮತೆ ಶುಲ್ಕ Betterment Fee ವಸೂಲಿಸುವ ಬಗ್ಗೆ:–**

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ಪರಿಶೋಧನಾ ಕಾರ್ಯ ಪ್ರಗತಿಯಲ್ಲಿದ್ದು ಹೊಸ ಬಡಾವಣೆಗಳ ಕಡತಗಳನ್ನು ಒದಗಿಸುವಂತೆ ಸೂಚಿಸಲಾಗಿರುತ್ತದೆ. ಆದರೆ 2017–18ನೇ ಸಾಲಿನಲ್ಲಿ ಯಾವುದೆ ಖಾಸಗಿ ಅಥವಾ ಸರ್ಕಾರದ ಬಡಾವಣೆಗಳನ್ನು ಅಭಿವೃದ್ಧಿಪಡಿಸಿರುವುದಿಲ್ಲವೆಂದು ಪ್ರಾಧಿಕಾರವು ದಿನಾಂಕ: 25.08.2018 ರ ಪತ್ರದಲ್ಲಿ ತಿಳಿಸಿರುತ್ತಾರೆ.

– ಯಾವುದೇ ಆಕ್ಷೇಪಣೆ ಇರುವುದಿಲ್ಲ –

**23) ಕೆರೆ ಅಭಿವೃದ್ಧಿ ಶುಲ್ಕ ವಸೂಲಾತಿ ಬಗ್ಗೆ:–**

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದ್ದು, ಕೆರೆ ಅಭಿವೃದ್ಧಿ ಶುಲ್ಕವನ್ನು 2017–18ನೇ ಸಾಲಿನಲ್ಲಿ ರೂ. 18,03,490=00 ನ್ನು ವಸೂಲಿಸಿದ್ದು ಈ ಮೊಬಲಗು ಯಾವುದೇ ಕೆರೆ ಅಭಿವೃದ್ದಿಗೆ ಉಪಯೋಗಿಸದೇ ಇರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿದ್ದು ಮೇಲ್ಕಂಡ ಮೊಬಲಗನ್ನು ಕೆರೆ ಅಭಿವೃದ್ದಿಗೆ ನಿಯಮಾನುಸಾರ ಉಪಯೋಗಿಸಲು ಸೂಚಿಸಿದೆ. ವಿವರವನ್ನು ವರದಿಯಲ್ಲಿ ಲಗತ್ತಿಸಲಾಗಿದೆ.[ಅನುಬಂಧ–4]

ಕೆರೆ ಅಭಿವೃದ್ಧಿ ಶುಲ್ಕವನ್ನು ಸರ್ಕಾರದಿಂದ ಸೂಚನೆ ಬರುವವರೆಗೂ ಯಾವುದೇ ವೆಚ್ಚಕ್ಕೆ ಉಪಯೋಗಿಸಬಾರದೆಂದು ಆದೇಶಿಸಿರುವ ಕಾರಣ ಕೆರೆ ಅಭಿವೃಧ್ಧಿ ಮೊಬಲಗನ್ನು ವಿನಿಯೋಗಿಸಿರುವುದಿಲ್ಲ.

**24) ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಮೊಬಲಗಿನ ಬಡ್ಡಿಯನ್ನು ಕಡಿಮೆ ವಸೂಲಿಸಿರುವ ಬಗ್ಗೆ:–**

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು ನಾಗರೀಕ ಸೌಲಭ್ಯದ ನಿವೇಶನದ ಹಂಚಿಕೆ ಕಡತಗಳನ್ನು ಪರಿಶೀಲಿಸಲಾಗಿ ಭಾರತ್ ಸ್ಕೌಟ್ ಆಂಡ್ ಗೈಡ್ಸ್ ರವರು ಭುಜಂಗೇಶ್ವರ ಬಡಾವಣೆಯ ಕ್ರ.ಸಂ 4ರ ನಿವೇಶನಕ್ಕೆ ದಿನಾಂಕ: 30.05.2016 ರಂದು ಕಛೇರಿ ಕಟ್ಟಡದ ಸಲುವಾಗಿ ಅರ್ಜಿ ಸಲ್ಲಿಸಿದ್ದು, ದಿನಾಂಕ: 20.08.2016 ರಂದು ನಗರಾಭಿವೃದ್ಧಿ ಪ್ರಾಧಿಕಾರವು ರಾಮಸಮುದ್ರ ಗ್ರಾಮದ ಸರ್ವೆ ನಂ 616/1, 616/300 ನಿರ್ಮಿಸಲಾಗಿರುವ ಬಡಾವಣೆಯಲ್ಲಿನ 835 ಚ.ಮೀ ವಿಸ್ತೀರ್ಣ ನಾಗರೀಕ ಸೌಲಭ್ಯ ನಿವೇಶನವನ್ನು ಗುತ್ತಿಗೆ ಆಧಾರದಲ್ಲಿ ನೀಡಲು ನಿರ್ಣಯಿಸಿದ್ದು ಅದುದರಿಂದ ಸದರಿ ನಿವೇಶನದ ಒಟ್ಟು ರೂ. 2839000=00 ರ ಶೇ 50% ರ

ನಾಗರೀಕ ಸೌಲಭ್ಯ ನಿವೇಶನದ ಬಡ್ಡಿ ಬಾಬ್ತು ಭಾರತ್ ಸ್ಕೌಟ್ ಅಂಡ್ ಗೈಡ್ಸ್, ಚಾಮರಾಜನಗರ ಇವರು ರೂ.40,533/–ಗಳನ್ನು ಚೆಕ್ (ಸ:995170 ದಿ:06–10–2018) ರಂದು ನೀಡಿರುತ್ತಾರೆ. ಅದನ್ನು ಪ್ರಾಧಿಕಾರದ ಖಾತೆಗೆ ಜಮಾ ಮಾಡಲಾಗಿದೆ. (ಪತ್ರದ ಪ್ರತಿ ಲಗತ್ತಿಸಿದೆ).

ರೂ. 1419500=00 ನ್ನು ಹಾಗೂ ನೋಂದಣಿ ಶುಲ್ಕ 1000=00 ಗಳನ್ನು 90 ದಿವಸದ ಒಳಗೆ ಪಾವತಿಸಿ ನೋಂದಣಿ ಮಾಡಿಕೊಳ್ಳಲು ತಿಳಿಸಿರುತ್ತಾರೆ.

ಎ] ಭಾರತ್ ಸ್ಕೌಟ್ ಆಂಡ್ ಗೈಡ್ಸ್ ರವರು ಮುಂಗಡವಾಗಿ ರೂ 100000=00 (99000+1000 ನೋಂದಣಿ ಶುಲ್ಕ) ಗಳನ್ನು ಪಾವತಿಸಿದ್ದು ದಿನಾಂಕ: 30.01.2017 ರಂದು ಇನ್ನುಳಿದ ಮೊತ್ತದ ಪಾವತಿಗಾಗಿ, ಕ್ರೋಢಿಕರಿಸಲು ಕಾಲಾವಕಾಶವನ್ನು ಕೋರಿರುತ್ತಾರೆ. ತದ ನಂತರ ದಿನಾಂಕ: 18.03.2017 ರಂದು ಪತ್ರದ ಸಂಖ್ಯೆ BSG/DHG/201/2016-17 ರ ಅನ್ವಯ ದಿನಾಂಕ: 16.03.2017 ಚೆಕ್ ಸಂಖ್ಯೆ 936424 ರಲ್ಲಿ ರೂ. 10,00,000=00 ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿದ್ದು, ಉಳಿದ 3,19,500=00 ಹಣವನ್ನು ಪಾವತಿಸಲು ಸಮಯವಕಾಶವನ್ನು ನೀಡಬೇಕಾಗಿ ಮನವಿ ಮಾಡಿ ಕೊಂಡಿರುತ್ತಾರೆ.

ಮುಂದುವರೆದಂತೆ ದಿನಾಂಕ: 28.10.2017 ರಂದು ಪತ್ರದ ಸಂಖ್ಯೆ BSG/DHG/143, 2016-17 ರನ್ವಯ ಚೆಕ್ ಸಂಖ್ಯೆ 699567 ರಲ್ಲಿ ದಿನಾಂಕ: 28.10.2017 ರಲ್ಲಿ ರೂ. 2,00,000=00ಗಳನ್ನು ಪಾವತಿಸಿರುತ್ತಾರೆ. ತದ ನಂತರ ಇನ್ನೂಳಿಕೆ ಮೊತ್ತ 1,20,500=00 ಗಳನ್ನು ದಿನಾಂಕ: 16.03.2018 ರಲ್ಲಿ ಚೆಕ್ ಸಂಖ್ಯೆ 995155 ರಲ್ಲಿ ಪಾವತಿಸಿರುತ್ತಾರೆ.

ಪ್ರಾಧಿಕಾರದ ಸಾಮಾನ್ಯ ನಿಬಂಧನೆಗಳ ಅನುಸಾರ ಗುತ್ತಿಗೆ ಮೊಬಲಗನ್ನು ಅಥವಾ ವಾರ್ಷಿಕ ಕಂತನ್ನು ಹಂಚಿಕೆಯ ನೋಟಿಸ್‌ನ್ನು ಸ್ವೀಕರಿಸಿದ ದಿನಾಂಕದಿಂದ 90 ದಿನಗಳ ಅವಧಿಯೊಳಗೆ ಪಾವತಿಸಬೇಕು ತಪ್ಪಿದ್ದಲ್ಲಿ 60 ದಿನಗಳಿಗೆ ಮೀರದ ವಿಸ್ತುತ ಅವಧಿಯನ್ನು ನೀಡಲಾಗುವುದು ಮತ್ತು ಈ ಅವಧಿಗೆ ಶೇ 15 ರ ಬಡ್ಡಿ ದರವನ್ನು ವಿಧಿಸಲಾಗುವುದು ಇದರ ಅನುಸಾರ ಪ್ರಾಧಿಕಾರದ ಪತ್ರದ ಸಂಖ್ಯೆ ಚಾರಾನಅಪ್ರಾ/ನಾಸಾನಿ/2017-18/483, ರನ್ವಯ ಬಡ್ಡಿಯ ಮೊತ್ತವು 78708=00 ಎಂದು ಭಾರತ್ ಸ್ಕೌಟ್ ಆಂಡ್ ಗೈಡ್ಸ್ ಗೆ ಪಾವತಿಸಲು ಸೂಚನಾ ಪತ್ರವನ್ನು ನೀಡಿದ್ದು, ದಿನಾಂಕ: 18.08.2018 ರಲ್ಲಿ ಚೆಕ್ ಸಂಖ್ಯೆ 995163 ರಲ್ಲಿ ರೂ 74708=00 ನ್ನು ಪಾವತಿಸಿರುತ್ತಾರೆ.

ನಿಯಮನುಸಾರ ಬಡ್ಡಿಯ ಮೊತ್ತವನ್ನು ಲೆಕ್ಕ ಹಾಕಿದಾಗ ಒಟ್ಟು ಮೊತ್ತ ರೂ 1,13,383=00 ಗಳಾಗಿರುತ್ತದೆ. ಇದರ ಅನುಸಾರ ಇನ್ನೂಳಿದ ಬಡ್ಡಿಯ ಮೊತ್ತ ರೂ. 40533=00 ಗಳನ್ನು ಭಾರತ್ ಸ್ಕೌಟ್ ಆಂಡ್ ಗೈಡ್ಸ್ ರವರಿಂದ ವಸೂಲಿಸ ಬೇಕಾಗಿ ಸೂಚಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

**ಬಡ್ಡಿಯ ಲೆಕ್ಕಾಚಾರ**

| | |
|---|---|
| ನಿವೇಶನದ ಒಟ್ಟು ಗುತ್ತಿಗೆ ಮೊತ್ತ | 2839000=00 |
| ಶೇ 50ರಷ್ಟು ಮೊತ್ತವನ್ನು ಠೇವಣಿ | 1419500=00 |
| ದಿನಾಂಕ: 30.05.2016 ರಂದು ಪಾವತಿಸಿದ್ದು ( 100000 – ನೋಂದಣಿ ಶುಲ್ಕ 1000) | 99000=00 |
| ಉಳಿಕೆ ಮೊತ್ತ | 1320500=00 |
| ದಿನಾಂಕ: 16.03.2017 ರಂದು ಪಾವತಿಸಿದ್ದು | 1000000=00 |
| ಉಳಿಕೆ ಮೊತ್ತ | 320500=00 |
| ದಿನಾಂಕ: 28.10.2017 ರಂದು ಪಾವತಿಸಿದ್ದು | 200000=00 |
| ಉಳಿಕೆ ಮೊತ್ತ | 120500=00 |
| ದಿನಾಂಕ: 16.03.2018 ರಂದು ಪಾವತಿಸಿದ್ದು | 120500=00 |
| ಉಳಿಕೆ ಮೊತ್ತ | – |

ದಿನಾಂಕ: 30.05.2016 ರಿಂದ 90 ದಿವಸಗಳ ಕಾಲಾವಕಾಶವನ್ನು ನೀಡಲಾಗಿದ್ದು ತದನಂತರ ಅಂದರೆ 30.08.2016 ರಿಂದ ಬಡ್ಡಿಯನ್ನು ಶೇ 12 ರಲ್ಲಿ ಉಳಿಕೆ ಮೊತ್ತಕ್ಕೆ ಲೆಕ್ಕ ಮಾಡಲಾಗಿ ದಿನಾಂಕ: 30.08.2016 ರಿಂದ 16.03.2017 ರ ವರೆಗೆ ಅಂದರೆ 195 ದಿವಸಗಳಿಗೆ ಬಡ್ಡಿ

$$1320500 \times \frac{195}{365} \times \frac{12}{100} = 84656{=}00$$

ದಿನಾಂಕ: 16.03.2017 ರಿಂದ ಮುಂದಿನ ಪಾವತಿಯ ದಿನಾಂಕ: 28.10.2017 ವರೆಗೆ ಉಳಿಕೆ ಮೊತ್ತದ ಮೇಲೆ ಪಾವತಿಸಬೇಕಾದ ಬಡ್ಡಿಯ ಮೊತ್ತ

$$320500 \times \frac{220}{365} \times \frac{12}{100} = 23181{=}00$$

ದಿನಾಂಕ: 28.10.2017 ರಿಂದ 16.03.2018 ರ ವರೆಗೆ ಉಳಿಕೆ ಮೊತ್ತದ ಮೇಲಿನ ಬಡ್ಡಿಯ ಮೊಬಲಗು.

$$120500 \times \frac{140}{365} \times \frac{12}{100} = 5546{=}00$$

**ಒಟ್ಟು ಬಡ್ಡಿಯ ಮೊತ್ತ =** 84656+23181+5546

= 113383=00

ಈಗಾಗಲೇ ಪಾವತಿಸಿರುವ ಬಡ್ಡಿಯ ಮೊತ್ತ = 72850=00

ಉಳಿಕೆ ಬಡ್ಡಿಯನ್ನು ಪಾವತಿಸ ಬೇಕಾಗಿರುವುದು = 40533=00

**24.ಬಿ] ಆಲ್ ಜಾಮಿಯತುಲ್ ಸೌದಿಯ ಲಿರ್ ಬನಾತ್ ಬಡ್ಡಿ ವಸೂಲಿ**

ಆಲ್ – ಜಾಮಿಯತುಲ್ – ಸೌದಿಯ ಲಿರ್‌ಬನಾತ್ ನ ಕಡತವನ್ನು ಪರಿಶೀಲಿಸಿದಾಗ ಸದರಿಯವರು ದಿನಾಂಕ: 31.05.2015 ರಂದು ನಾಗರೀಕ ಸೌಲಭ್ಯ ನಿವೇಶನ ನೀಡುವಂತೆ ಕೋರಿರುತ್ತಾರೆ. ಮತ್ತು ಉತ್ತುವಳ್ಳಿ ಬಡಾವಣೆಯಲ್ಲಿರುವ ಸರ್ವೆ ನಂಬರ್ 97/2, 98/2 ಹಂಚಿಕೆ ಮಾಡುವಂತೆ ಕೋರಿರುತ್ತಾರೆ. ಹಾಗೂ ನೋಂದಣಿಯ ಶುಲ್ಕ ರೂ. 2000=00 ಗಳನ್ನು ಮತ್ತು ಪ್ರಾರಂಭಿಕ ಠೇವಣಿ ರೂ. 75890=00 ನ್ನು ಡಿ.ಡಿ ಸಂಖ್ಯೆ 890471 ರಲ್ಲಿ ದಿನಾಂಕ: 31.05.2016 ರಂದು ಪಾವತಿಸಿರುತ್ತಾರೆ. ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಪತ್ರದ ಸಂಖ್ಯೆ: ಚಾರಾನಪ್ರಾ /ನಾಸಾನಿ/ಗು.ಹಣ/03/2016–17/254, ದಿನಾಂಕ: 20.08.2016 ರನ್ವಯ ಪ್ರಾಧಿಕಾರದ 58ನೇ ಸಾಮಾನ್ಯ ಸಭೆಯ ನಿರ್ಣಯದಂತೆ ಶಿಕ್ಷಣ, ಸಾಮಾಜಿಕ ಚಟುವಟಿಕೆಗಳ ಉದ್ದೇಶಕ್ಕಾಗಿ ಉತ್ತುವಳ್ಳಿ ಗ್ರಾಮದ ಸ.ನಂ 97/2, 98/2 ಒಟ್ಟು 1597 ಚ.ಮಿ ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ರೂ. 7,58,860=00 ಗಳನ್ನು 90 ದಿನದೊಳಗೆ ಪಾವತಿ ಮಾಡಿ ನೋಂದಣಿ ಮಾಡಿಸಿಕೊಳ್ಳ ಬೇಕಾಗಿ ತಿಳಿಸಲಾಗಿರುತ್ತದೆ.

ದಿನಾಂಕ: 25.11.2016 ರಂದು ಅಲ್ – ಜಾಮಿಯತುಲ್ ಸೌದಿಯ ಲಿರ್ ಬನಾತ್ ರವರು ಡಿ.ಡಿ ಸಂಖ್ಯೆ 779840 ರಲ್ಲಿ 250000=00 ಮತ್ತು ಡಿ.ಡಿ ಸಂಖ್ಯೆ 511276 ರಲ್ಲಿ 25000=00 ಗಳನ್ನು ಪಾವತಿಸಿದ್ದು, ನೋಟ್‌ಬ್ಯಾನ್ ಆಗಿರುವ ಕಾರಣದಿಂದ ಉಳಿದ ಮೊತ್ತ 407970=00 ಪಾವತಿಸಲು ಕಾಲಾವಕಾಶವನ್ನು ಕೋರಿರುತ್ತಾರೆ. ಮುಂದುವರಿದಂತೆ ದಿನಾಂಕ: 14.02.2018 ರಂದು ಡಿ.ಡಿ ಸಂಖ್ಯೆ 556953 ರಲ್ಲಿ ರೂ. 340000=00 ಗಳನ್ನು ಪಾವತಿಸಿರುತ್ತಾರೆ.

ಆಲ್ ಜಾಮಿಯತುಲ್ ಸೌದಿಯ ಲಿರ್ ಬನಾತ್, ಚಾಮರಾಜನಗರ ಇವರಿಗೆ ಬಡ್ಡಿ ಬಾಬ್ತು ರೂ.63,826/–ಗಳನ್ನು ಪಾವತಿಸುವಂತೆ ದಿ:07–03–2018 ರಂದು ಪತ್ರ ಬರೆಯಲಾಗಿದ್ದು, ಸದರಿ ಸಂಸ್ಥೆಯವರು ಬಡ್ಡಿಯನ್ನು ಇಲ್ಲಿಯವರೆಗೆ ಪಾವತಿಸಿರುವುದಿಲ್ಲ. ಸದರಿ ಸಂಸ್ಥೆಯವರು ಬಡ್ಡಿಯನ್ನು ಪಾವತಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು (ಪತ್ರದ ಪ್ರತಿ ಲಗತ್ತಿಸಿದೆ).

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ರವರ ಪತ್ರದ ಸಂಖ್ಯೆ ಚಾರಾನಪ್ರಾ/ನಾಸಾನಿ/2017–18 ರಲ್ಲಿ ಅಲ್ ಜಾಮಿಯತುಲ್ ಸೌದಿಯ ಲಿರ್ ಬನಾತ್ ಚಾಮರಾಜನಗರ ವರೆಗೆ ಪತ್ರವನ್ನು ಬರೆದಿದ್ದು ಅದರನ್ವಯ ಉಳಿಕೆ ಮೊತ್ತ 67970 ಮತ್ತು ಶೇ 12 ರ ಬಡ್ಡಿಯ ಮೊತ್ತ 61195=00 ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ಸೂಚಿಸಿರುತ್ತಾರೆ.

ಆದರೆ ಶೇ 12 ರ ಬಡ್ಡಿಯ ದರದಲ್ಲಿ ಉಳಿಕೆ ಮೊತ್ತಕ್ಕೆ ಬಡ್ಡಿಯ ಮೊತ್ತವನ್ನು ಲೆಕ್ಕ ಹಾಕಿದಾಗ ಅಧಿಕವಾಗಿದ್ದು ಅಲ್ ಜಾಮಿಯತುಲ್ ಸೌದಿಯ ಲಿರ್ ಬನಾತ್ ರವರಿಂದ ಬಡ್ಡಿಯ ಮೊತ್ತ ರೂ 63826=00 ಮತ್ತು ಉಳಿಕೆ ಗುತ್ತಿಗೆ ಮೊತ್ತ 67970=00 ನ್ನು ವಸೂಲಿಸಬೇಕಾಗಿ ಸೂಚಿಸಲಾಗಿರುತ್ತದೆ. ಬಡ್ಡಿಯ ಲೆಕ್ಕಾಚಾರವನ್ನು ಈ ಕೆಳಕಂಡಂತೆ ನೀಡಲಾಗಿದೆ.

**ಅಲ್ ಜಾಮಿಯ – ಸೌದಿಯ ಲಿರ್ ಬನಾತ್ ನಿವೇಶನದ ಬಡ್ಡಿಯ ಲೆಕ್ಕಾಚಾರ.**

| | |
|---|---|
| ನಿವೇಶನದ ಒಟ್ಟು ಗುತ್ತಿಗೆ ಮೊತ್ತ | 758860=00 |
| ಮುಂಗಡವಾಗಿ ಪಾವತಿಸಿದ್ದು 31.05.2016 | 75890=00 |
| ಉಳಿಕೆ ಮೊತ್ತ | 682970=00 |
| ದಿನಾಂಕ: 25.11.2016 ರಂದು ಪಾವತಿಸಿದ ಮೊತ್ತ | 275000=00 |
| ಉಳಿಕೆ ಮೊತ್ತ | 407970=00 |
| ದಿನಾಂಕ: 14.02.2018 ರಂದು ಪಾವತಿಸಿದ್ದು | 340000=00 |
| ಉಳಿಕೆ ಮೊತ್ತ | 67970=00 |

ದಿನಾಂಕ: 20.08.2016 ರಂದು ನಿವೇಶನವು ಅಲ್ ಜಾಮಿಯತುಲ್ ಸೌದಿಯಾ ಲಿರ್ ಬನಾತ್ ರವರಿಗೆ ಹಂಚಿಕೆಯಾಗಿದ್ದು 90 ದಿನಗಳ ಕಾಲಾವಕಾಶವನ್ನು ನೀಡಿರುತ್ತಾರೆ ಅಂದರೆ 20.11.2016 ರ ವರೆಗೆ

ದಿನಾಂಕ: 20.11.2016 ರಿಂದ 25.11.2016 ರ ವರೆಗೆ ಬಡ್ಡಿಯ ಮೊತ್ತ

$$682970 \times \frac{5}{365} \times \frac{12}{100} = 1123=00$$

ದಿನಾಂಕ: 25.11.2016 ರಿಂದ 14.02.2016 ರ ವರೆಗೆ ಉಳಿಕೆ ಮೊತ್ತದ ಮೇಲಿನ ಬಡ್ಡಿಯ ಮೊತ್ತ

$$\frac{407970 \times 435}{365} \times \frac{12}{100} = 58345=00$$

ದಿನಾಂಕ: 14.02.2018 ರಿಂದ 30.08.2018 ರ ವರೆಗೆ ಉಳಿಕೆ ಮೊತ್ತದ ಮೇಲಿನ ಬಡ್ಡಿಯ ಮೊತ್ತ

$$\frac{67970 \times 115}{365} \times \frac{12}{100} = 4358=00$$

**ಒಟ್ಟು ಬಡ್ಡಿಯ ಮೊತ್ತ = 1123+58345+4358**

**= ರೂ 63826=00**

2017–18ನೇ ಸಾಲಿನ ಲೆಕ್ಕ ತಪಾಸಣಾ ಅವಧಿಯಲ್ಲಿ ಯಾವುದೇ C.A.Site Allott ಮಾಡಿರುವುದು ಪರಿಶೀಲನೆಗೆ ಒದಗಿಸಿದ ವಿವರಗಳಿಂದ ಕಂಡುಬಂದಿರುವುದಿಲ್ಲ [ಅನುಬಂಧ–05]. ಸರ್ಕಾರಿ ಕಛೇರಿಗಳಿಗೆ C.A.Site Allott ಮಾಡುವಾಗ ಶೇ.50% [ಅಂದಾಜು ಒಟ್ಟು ಮೌಲ್ಯಕ್ಕೆ] ಶುಲ್ಕ ವಸೂಲಿ ಮಾಡುವುದು ಹಾಗೂ ಸಂಘ, ಸಂಸ್ಥೆಗಳಿಗೆ, ಸಾಮಾಜಿಕ ಕೇಂದ್ರಗಳಿಗೆ C.A.Site Allott ಮಾಡುವಾಗ ಪೂರ್ಣ ಮೊತ್ತ ವಸೂಲಿ ಮಾಡುವ ಬಗ್ಗೆ ಹಾಗೂ ಆಗಿಂದಾಗ್ಗೆ ಸರ್ಕಾರವು ಹೊರಡಿಸುವ ಆದೇಶಗಳ ಪ್ರಕಾರ ಕ್ರಮ ಕೈಗೊಳ್ಳುವುದು.

**25) ಹೊರಗುತ್ತಿಗೆ ಆಧಾರದಲ್ಲಿ ಕಛೇರಿ ಕೆಲಸಗಳಿಗೆ ಸಿಬ್ಬಂದಿಗಳನ್ನು ನೇಮಿಸಿಕೊಂಡಿರುವುದು:–**

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕತಪಾಸಣೆಯನ್ನು ಕೈಗೊಳ್ಳಲಾಗಿದ್ದು, ಕಛೇರಿ ಕೆಲಸಗಳಿಗೆ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ನೇಮಿಸಿಕೊಂಡಿರುತ್ತಾರೆ. 2016–17ನೇ ಸಾಲಿನ ಆಕ್ಷೇಪಣೆಯ ಅನ್ವಯ ಟೆಂಡರ್ ಪ್ರಕ್ರಿಯೆ ಮೂಲಕ ನೇಮಿಸಿಕೊಂಡಿರುತ್ತಾರೆ. ಹಾಗೂ ಚಿತ್ತಾರ ಎಂಟರ್ ಪ್ರೈಸಸ್ ರವರಿಂದ ಆದಾಯ ತೆರಿಗೆಯನ್ನು ಕಟಾಯಿಸಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಿರುತ್ತಾರೆ.

ಹೊರಗುತ್ತಿಗೆ ಆಧಾರದಲ್ಲಿ ಕಛೇರಿ ಕೆಲಸಗಳಿಗೆ ಸಿಬ್ಬಂದಿಗಳನ್ನು ನೇಮಿಸಿಕೊಂಡಿರುವನ್ವಯ ಆದಾಯ ತೆರಿಗೆಯನ್ನು ಪ್ರತಿ ಮಾಹೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಟಾಯಿಸಿ ತೆರಿಗೆ ಇಲಾಖೆಗೆ ನೇರವಾಗಿ ಪಾವತಿಸಲಾಗುತ್ತಿದೆ.

ಹೊರಗುತ್ತಿಗೆ ನೌಕರರನ್ನು ಟೆಂಡರ್ ಮುಖೇನ ನೇಮಿಸಿಕೊಳ್ಳಲು ದಿನಾಂಕ: 12.07.2017 ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದು 03 ಸಂಸ್ಥೆಯವರು ದರ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ದರಪಟ್ಟಿಯ ಅನುಸಾರ ಕಡಿಮೆ ದರವಿದ್ದ ಚಿತ್ತಾರ ಎಂಟರ್ ಪ್ರೈಸಸ್ ರವರಿಗೆ ದಿನಾಂಕ: 26.07.2017 ರಂದು 01.08.2017 ರಿಂದ 30.07.2018 ರವರೆಗೆ ಸೇವೆಯನ್ನು ಒದಗಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಹೊರಗುತ್ತಿಗೆ ನೌಕರರು ಕಛೇರಿ ಸಹಾಯಕ –2, ಕಂಪ್ಯೂಟರ್ ಅಪರೇಟರ್ –01, ವಾಹನ ಚಾಲಕ –01, (ಅಧ್ಯಕ್ಷರಿಗೆ), ಡಿ ದರ್ಜೆ ನೌಕರರು, (ಅಧ್ಯಕ್ಷರಿಗೆ), ರವರಿಗೆ ಒಟ್ಟು 07 ನೌಕರರನ್ನು ಸರಾಸರಿ ರೂ 10694=00 ನೌಕರರಿಗೆ ನೀಡಲು ಒಪ್ಪಿಗೆ ಸೂಚಿಸಿರುತ್ತಾರೆ. ಇದರನುಸಾರ ಪ್ರತಿ ಮಾಹೆ 74858=00 ಗಳನ್ನು ಪಾವತಿಸಿದ್ದು ಆದಾಯ ತೆರಿಗೆಯನ್ನು ಪ್ರಾಧಿಕಾರವೇ ಕಟಾಯಿಸಿಕೊಂಡಿರುವುದಿಲ್ಲ ಮತ್ತು ಗುತ್ತಿಗೆದಾರನೆ ತ್ರೈಮಾಸಿಕವಾಗಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಿ ಸಂದಾಯ ರಶೀತಿಯನ್ನು ನೀಡಿರುತ್ತಾರೆ. ಇನ್ನು ಮುಂದೆ ಆದಾಯ ತೆರಿಗೆಯನ್ನು ಪ್ರಾಧಿಕಾರವೇ ಕಟಾಯಿಸಿ ತೆರಿಗೆ ಇಲಾಖೆಗೆ ನೇರವಾಗಿ ಪಾವತಿಸಬೇಕಾಗಿ ಸೂಚಿಸಲಾಗಿದೆ.

ಪ್ರಾಧಿಕಾರವು ಪ್ರತಿ ಮಾಹೆ ವೇತನದ ಅಥವಾ ಸೇವಾ ವೆಚ್ಚ ಪಾವತಿಸುವಾಗ ಹಿಂದಿನ ಮಾಹೆಯ ಪಿ.ಎಫ್. ವಂತಿಕೆ, ನೌಕರರ ವೈಯಕ್ತಿಕ ಪಿ.ಎಫ್. ವಂತಿಕೆ ಖಾತೆಗೆ ಜಮೆಯಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಂಡು ಮುಂದಿನ ತಿಂಗಳ ಸೇವಾ ವೆಚ್ಚವನ್ನು ಪಾವತಿಸುವುದು.

ಪ್ರತಿ ಮಾಹೆ ಸೇವಾ ವೆಚ್ಚವನ್ನು ಪಾವತಿಸುವಾಗ ಹಿಂದಿನ ಮಾಹೆಯ ಪಿ.ಎಫ್ ವಂತಿಕೆ, ನೌಕರರ ವೈಯಕ್ತಿಕ ಪಿ.ಎಫ್ ವಂತಿಕೆ ಖಾತೆಗೆ ಜಮಾ ಆಗಿರುವುದರ ಬಗ್ಗೆ ಸಂಸ್ಥೆಯವರಿಂದ ಖಾತರಿಪಡಿಸಿಕೊಂಡ ಪತ್ರವನ್ನು ಪಡೆದು ನಂತರ ಚೆಕ್‌ನ್ನು ಪಾವತಿಸಲಾಗುತ್ತಿದೆ.

## 26) ಲೆಕ್ಕ ತಪಾಸಣಾ ಶುಲ್ಕ ಪಾವತಿ ಬಗ್ಗೆ:–

ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18 ನೇ ಸಾಲಿನ ಲೆಕ್ಕತಪಾಸಣೆಯನ್ನು ಕೈಗೊಳ್ಳಲಾಗಿದ್ದು, ಲೆಕ್ಕ ತಪಾಸಣಾ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ನಿಯಮ – 49(4) ರ ಪ್ರಕಾರ ಲೆಕ್ಕ ಪರಿಶೋಧನೆ ಶುಲ್ಕ ಪಾವತಿಸಬೇಕಾಗಿರುತ್ತದೆ.

2017–18ನೇ ಸಾಲಿನ ಲೆಕ್ಕ ತಪಾಸಣೆ ಶುಲ್ಕ ರೂ.20,707/–ಗಳನ್ನು ಲೆಕ್ಕ ಶೀರ್ಷಿಕೆ 0070 ಇತರೆ ಆಡಳಿತ ವೆಚ್ಚ ಸೇವೆಗಳು – 60 – ಇತರೆ ಸೇವೆಗಳು 110 – 101 ಕ್ಕೆ ದಿನಾಂಕ:26–09–2018 ರಂದು ಜಮಾ ಮಾಡಲಾಗಿದೆ (ಚಲನ್ ಪ್ರತಿ ಲಗತ್ತಿಸಿದೆ).

ಲೆಕ್ಕ ತಪಾಸಣಾ ಶುಲ್ಕದ ಘೋಷ್ವಾರೆ ಕೆಳಕಂಡಂತಿದೆ.

| | |
|---|---|
| ದಿನಾಂಕ: 01–04–2017ಕ್ಕೆ ಪ್ರಾರಂಭ ಶಿಲ್ಕು | ರೂ. 10666=00 |
| 2017–18 ಸಾಲಿನ ಜಮಾ ಮಾಡಬೇಕಾಗಿರುವುದು | ರೂ. 20707=00 |
| **ಒಟ್ಟು** | **ರೂ. 31373=00** |
| 2017–18ನೇ ಸಾಲಿನಲ್ಲಿ ಪಾವತಿಸಿರುವುದು | ರೂ. 10666=00 |
| ದಿನಾಂಕ: 31–3–2018ರ ಅಂತಿಮ ಶಿಲ್ಕು | ರೂ. 20707=00 |

## 27) ಸಾಮಾನ್ಯ ಅಭಿಪ್ರಾಯ :–

1) ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ತಪಾಸಣಾ ವರದಿಗೆ ಸಂಬಂಧಿಸಿದಂತೆ, 2016–17ನೇ ಸಾಲಿನವರೆಗೆ ಬಾಕಿ ಆಕ್ಷೇಪಣೆ ಕಂ.ಸಂ ಒಟ್ಟು **23** ಮತ್ತು ಮೊತ್ತ **ರೂ.837329.00** ಹಾಗೂ ವಸೂಲಾತಿ ಕಂ.ಸಂ ಒಟ್ಟು **33** ಮತ್ತು ಮೊತ್ತ **ರೂ.627065.00** ಇದ್ದು, ಇವುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಅಗತ್ಯ ಮೂಲ ದಾಖಲೆಗಳೊಂದಿಗೆ ಸಕ್ಷಮ ಪ್ರಾಧಿಕಾರದ ಶಿಫಾರಸ್ಸಿನೊಂದಿಗೆ ತ್ರಿಪ್ರತಿಯಲ್ಲಿ ಸಲ್ಲಿಸಲು ತಿಳಿಸಲಾಗಿದೆ.
2) ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೂಡಿಕೆ ಮಾಡಲಾದ ಮೊತ್ತಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ **ರೂ.182687.00ಗಳನ್ನು** ಕಡಿತ ಮಾಡಿದ್ದು, ಇದನ್ನು ಬ್ಯಾಂಕ್‌ನೊಂದಿಗೆ ಮತ್ತು ಆದಾಯ ತೆರಿಗೆ ಇಲಾಖೆಯೊಂದಿಗೆ ವ್ಯವಹರಿಸಿ ಹಿಂಪಡೆದುಕೊಳ್ಳಲು ಆಕ್ಷೇಪಿಸಲಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಲಾಗಿದೆ.
3) ನಗರಾಭಿವೃದ್ಧಿ ಪ್ರಾಧಿಕಾರದಿಂದ 2017–18ನೇ ಸಾಲಿನಲ್ಲಿ ಯಾವುದೇ ಬಡಾವಣೆಗಳನ್ನು ನಿರ್ಮಿಸಿಲ್ಲವೆಂದು ತಿಳಿಸಿದ್ದು ಹಾಗೂ ಅದೇ ರೀತಿ ಖಾಸಗಿ ಬಡಾವಣೆಗಳು ಸಹಾ ನಿರ್ಮಾಣವಾಗಿಲ್ಲವೆಂದು ಆಯುಕ್ತರು ತಿಳಿಸಿರುತ್ತಾರೆ. ನಗರಾಭಿವೃದ್ಧಿ ಪ್ರಾಧಿಕಾರವು ಸಿದ್ಧಪಡಿಸಿಕೊಂಡಿರುವ Master Plan ಅನುಷ್ಠಾನಕ್ಕೆ ಸಂಪನ್ಮೂಲ ಕ್ರೋಢೀಕರಣ ಮಾಡಲು ಪ್ರಾಧಿಕಾರದಿಂದ ಬಡಾವಣೆಗಳ ನಿರ್ಮಾಣದ ಮೂಲಕ ಉತ್ತಮತೆ ಶುಲ್ಕವನ್ನು ಸಂಗ್ರಹಿಸಿ ಆದ್ಯತೆ ಮೇರೆಗೆ ಆಯವ್ಯಯ

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಹಿಂದಿನ ಸಾಲುಗಳ ಲೆಕ್ಕ ತಪಾಸಣಾ ವರದಿಗಳಲ್ಲಿ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿಯನ್ನು ಈಗಾಗಲೇ ಸಲ್ಲಿಸಲಾಗಿದೆ. ಆಡಿಟ್ ಕಂಡಿಕೆಗಳ ಇತ್ಯರ್ಥವಾಗುವುದಕ್ಕೆ ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಚಾಮರಾಜನಗರ ಇವರಿಗೆ ಈ ಕಚೇರಿ ಪತ್ರ ದಿ:22–05–2017 ರಲ್ಲಿ ಪತ್ರ ಬರೆಯಲಾಗಿದೆ. ಅವರಿಂದ ಕಂಡಿಕೆಗಳು ಇತ್ಯಾರ್ಥವಾದ ನಂತರ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

2017–18ನೇ ಸಾಲಿನ ಲೆಕ್ಕ ವರದಿಯಲ್ಲಿ ತಿಳಿಸಿರುವ ಸಾಮಾನ್ಯ ಅಭಿಪ್ರಾಯಗಳಿಗೆ ಗಮನಹರಿಸಿ ಸಂಬಂಧಪಟ್ಟವರಿಗೆ ಪತ್ರ ಮುಖಾಂತರ ವಿಷಯವನ್ನು ತಿಳಿಸಿ ಸಂಬಂಧಿಸಿದವರಿಂದ ಮೊಬಲಗನ್ನು ವಸೂಲಿ ಮಾಡಿ ಪ್ರಾಧಿಕಾರ ಖಾತೆಗೆ ಜಮಾ ಮಾಡಲಾಗುವುದು.

ಸಿದ್ದಪಡಿಸಬೇಕಾಗಿರುವುದು ಪ್ರಾಧಿಕಾರದ ಕರ್ತವ್ಯವೆಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

ಬಾಕಿ ಇರುವ ಉತ್ತಮತೆ ಶುಲ್ಕ ರೂ.26448/-ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡಿ ಪ್ರಾಧಿಕಾರದ ಖಾತೆಗೆ ಜಮೆ ಮಾಡಲು ಸೂಚಿಸಲಾಗಿದೆ.

4) ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೊಳಚೆ ಪ್ರದೇಶ ಅಭಿವೃದ್ಧಿಗಾಗಿ ಸಂಗ್ರಹಿಸಿರುವ ಉಪಕರ ರೂ.36099.00ಗಳನ್ನು ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿ ವರದಿ ನೀಡಲು ಸೂಚಿಸಲಾಗಿದೆ.
5) ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ರೂ.40,00,000/- ಮತ್ತು ನಿರ್ಮಿತಿ ಕೇಂದ್ರಕ್ಕೆ ರೂ.4,54,000/-ಗಳನ್ನು ನೀಡಿದ್ದು, ಈ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ ಬಗ್ಗೆ ಲೆಕ್ಕ ತಪಾಸಣೆಗೆ ಮಾಹಿತಿ ಒದಗಿಸಿರುವುದಿಲ್ಲ. ಕೂಡಲೇ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸಿಕೊಳ್ಳುವುದು. ಇಲ್ಲವಾದಲ್ಲಿ ಸಂಬಂಧಿಸಿದ ಸಂಸ್ಥೆಗಳಿಂದ ಬಡ್ಡಿ ಸಮೇತ ಬಾಕಿ ಮೊತ್ತ ವಸೂಲಿಸಲು ಕ್ರಮ ಕೈಗೊಳ್ಳುವುದು.
6) Master Plan ತಯಾರಿಸುವ ಸಂಬಂಧ STEM ಸಂಸ್ಥೆಯವರು ಸಲ್ಲಿಸಿರುವ Tax Invoiceಗೆ ಪಾವತಿಸಿರುವ ಮೊತ್ತದ ಮೇಲೆ IT ಮತ್ತು ಕಾರ್ಮಿಕ ಕಲ್ಯಾಣ ನಿಧಿ ಒಟ್ಟು ರೂ.24385.00ಗಳನ್ನು ಕಡಿತಗೊಳಿಸಿರುವುದಿಲ್ಲ. ಕೂಡಲೇ ಕಟಾಯಿಸಿ ಸಂಬಂದಪಟ್ಟ ಇಲಾಖೆಗಳಿಗೆ ಜಮೆ ಮಾಡಲು ಸೂಚಿಸಿದೆ.
7) ನಾಗರೀಕ ಸೌಲಭ್ಯ ನಿವೇಶನದ ನಿವೇಶನದಾರರಿಂದ ಕಡಿಮೆ ಬಡ್ಡಿ ವಸೂಲಿ ಮಾಡಿದ್ದು, ಇದರಿಂದ ಪ್ರಾಧಿಕಾರಕ್ಕೆ ರೂ.172329/- ನಷ್ಟವಾಗಿದ್ದು, ಇದನ್ನು ವಸೂಲಿ ಮಾಡಿ ಮಾಹಿತಿ ನೀಡಲು ಸೂಚಿಸಲಾಗಿದೆ.
8) ಪ್ರಾಧಿಕಾರವು ಆಯ-ವ್ಯಯ ಸಿದ್ದಪಡಿಸಿಕೊಳ್ಳುವಾಗ ವಾಸ್ತವಿಕ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಆಯವ್ಯಯ ಸಿದ್ದಪಡಿಸಿಕೊಳ್ಳಲು ಸೂಚಿಸಿದೆ.
9) ನಗರಾಭಿವೃದ್ಧಿ ಪ್ರಾಧಿಕಾರವು ಕೆರೆ ಅಭಿವೃದ್ಧಿಗೆ ಸಂಬಂಧಪಟ್ಟವರಿಂದ ರೂ.18,03,490.00 ವಸೂಲಿ ಮಾಡಿದ್ದು, ಇದನ್ನು ಕೆರೆಗಳ ಅಭಿವೃದ್ಧಿಗಾಗಿ ಕೆರೆ

ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಪಡೆದು ನಿಯಮಾನುಸಾರ ಕೆರೆಗಳ ಅಭಿವೃದ್ಧಿಗೆ ಬಳಕೆ ಮಾಡಲು ತಿಳಿಸಲಾಗಿದೆ.

10) ನಗರಾಭಿವೃದ್ಧಿ ಪ್ರಾಧಿಕಾರವು ಹೂಡಿಕೆ ಮಾಡಲಾದ ಮೊಬಲಗಿನಲ್ಲಿ ರೂ.14833.00ಗಳಷ್ಟು ಬಡ್ಡಿ ನಷ್ಟವಾಗಿದ್ದು ಇದನ್ನು ವಸೂಲಿ ಮಾಡಿ ಪ್ರಾಧಿಕಾರದ ಖಾತೆಗೆ ಜಮೆ ಮಾಡಿ ಮಾಹಿತಿ ನೀಡಲು ತಿಳಿಸಲಾಗಿದೆ.

ಸಹಿ/–
ಅಪರ ನಿರ್ದೇಶಕರು
ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕ
ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಮೈಸೂರು.

**ಚಾಮರಾಜನಗರ ರಾಮಸಮುದ್ರ–ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ವಾರ್ಷಿಕ ಜಮಾ ಖರ್ಚುಗಳ ವಿವರ :–**

| ಕ್ರ.ಸಂ | ಆದಾಯದ ವಿವರ | ಮೊಬಲಗು | ವೆಚ್ಚದ ವಿವರ | ಮೊಬಲಗು |
|---|---|---|---|---|
| | 01.04.2017ಕ್ಕೆ ಪ್ರಾರಂಭ ಶಿಲ್ಕು | 5536523 | ಅಧ್ಯಕ್ಷರ ಗೌರವಧನ/ಬಾಡಿಗೆ | 96000 |
| 01 | ಅನುದಾನ | – | ಆಯುಕ್ತರ ವೇತನ | 371015 |
| 02 | ತೆರಿಗೆ ಜಮಾ | – | ದೂರವಾಣಿ ವೆಚ್ಚ | 21003 |
| 03 | ಆದಾಯತೆರಿಗೆ ಜಮಾ | – | ಹೊರಗುತ್ತಿಗೆ ನೌಕರರ ವೇತನ | 592356 |
| 04 | ಪರಿಶೀಲನಾ ಶುಲ್ಕ | 377270 | ಲೆಕ್ಕಪರಿಶೋಧನಾ ಶುಲ್ಕ | 10666 |
| 05 | ಕೆಟಿಸಿಡಿ ಕಾಯ್ದೆ ಕಾಲಂ18ರ ಶುಲ್ಕ | 528960 | ನಗರ ಯೋಜನಾ ಸದಸ್ಯರ ವೇತನ | 2000 |
| 06 | ಕೊಳಚೆ ನಿರ್ಮೂಲನ ಮಂಡಳಿ ಶುಲ್ಕ | 51570 | ಅಧ್ಯಕ್ಷರ ವಾಹನ ಇಂಧನ | 192042 |
| 07 | ವಿನ್ಯಾಸ ತಯಾರಿಕೆ ಶುಲ್ಕ | 40100 | ವಕೀಲರ ಶುಲ್ಕ | 42500 |
| 08 | ನಕ್ಷೆ ಪ್ರತಿ ಶುಲ್ಕ | 4680 | ವಾಹನದ ರಿಪೇರಿ | 94205 |
| 09 | ನವೀಕರಣ ಶುಲ್ಕ | – | ಇಂದನ ಖರೀದಿ | 85753 |
| 10 | ಮಾಹಿತಿ ಹಕ್ಕು | 1500 | ವಾಹನ ವಿಮೆ | 24394 |
| 11 | ಪತ್ರಿಕಾ ಪ್ರಕಟಣೆ | 99500 | ನಿರ್ಮಿತಿ ಕೇಂದ್ರ | 0 |
| 12 | ಮೇಲ್ವಿಚಾರಣೆ ಶುಲ್ಕ | 456000 | ಜನತಾಬಜಾರ್/ಲೇಖನ ಸಾಮಾಗ್ರಿ | 9187 |
| 13 | ನಾಗರೀಕ ಸೌಲಭ್ಯ ನಿವೇಶನ ನೋಂದಣಿ ಶುಲ್ಕ | – | ಅಂಚೆ ಚೀಟಿ | 5000 |
| 14 | ಭೂ ಉಪಯೋಗ ದೃಢೀಕರಣ ಪತ್ರ | – | ಕಛೇರಿ ವೆಚ್ಚ | – |
| 15 | ನಾಗರೀಕಸೌಲಭ್ಯ ನಿವೇಶನ ಹಂಚಿಕೆ ಅರ್ಜಿ | – | ಕಛೇರಿ ಸಾದಿಲ್ವಾರು | 76010 |
| 16 | ಕೆರೆ ಪುನಶ್ಚೇತನ ಬಾಬ್ತು | 1903490 | ಪತ್ರಿಕಾ ಪ್ರಕಟಣೆ ಬಾಬ್ತು | 165141 |
| 17 | ಕಟ್ಟಡ ರಹದಾರಿ ಸಂಬಂಧ/ಇತರೆ | 376960 | ಕಛೇರಿ ನಿರ್ವಹಣಾ ವೆಚ್ಚ | 73725 |
| 18 | ಖಾಯಂ ಮುಂಗಡ | – | ಕಛೇರಿ ದೂರವಾಣಿ | – |
| 19 | ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಪ್ರಾರಂಭಿಕ ಠೇವಣಿ | – | ಉತ್ತಮತೆ ಶುಲ್ಕ | 10313 |
| 20 | ನಾಗರೀಕ ಸೌಲಭ್ಯ ನಿವೇಶನ ಗುತ್ತಿಗೆ ಮೋಬಲಗು | 2225182 | ಹೊರಗುತ್ತಿಗೆ ಮೂಲಕ ವಾಹನ ಸೇವಾ ವೆಚ್ಚ | 67105 |
| 21 | ಬಿಸಿನೆಸ್ ಪಾರ್ಕ್ ಅರ್ಜಿ ಶುಲ್ಕ | – | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ | – |
| 22 | ಬಿಸಿನೆಸ್ ಪಾರ್ಕ್ ನೋಂದಣಿ ಶುಲ್ಕ | – | ಸರ್ಕಾರಿ ಕಲಾವಣಿಗಳು ಐ.ಟಿ ಬಾಬ್ತು ಪಾವತಿ | – |
| 23 | ವಸತಿ ಯೋಜನೆ ಜಮೀನನ್ನು ಸ್ವಚ್ಚಗೊಳಿಸಿದ ಬಾಬ್ತು | – | ಪ್ರಾಧಿಕಾರದ ಹೊಸ ಕಟ್ಟಡ ನಿರ್ಮಾಣ ಸಂಬಂಧ KRIDL ಮುಂಗಡ | 40,00000 |
| 24 | ಇತರೆ | 7431 | ಋಣಭಾರ ಡಿ.ಡಿ/ ಹೊಸ ವಾಹನದ ಖರೀದಿ | – |

| | | | | |
|---|---|---|---|---|
| 25 | ಮಹಾ ಯೋಜನೆ – 2 | 25000 | ವಸತಿ ಯೋಜನೆ ಜಮೀನು ಸ್ವಚ್ಛಗೊಂಡದ್ದು. | – |
| 26 | ಸಭಾ ಭತ್ಯೆ ಪಾವತಿ | 300 | ಕೊಳಗೇರಿ ಅಭಿವೃದ್ಧಿ ಮಂಡಳಿ | – |
| 27 | | | ಬಸ್ ಷೆಲ್ಟರ್ ನಿರ್ಮಾಣ | – |
| 28 | | | ಕಛೇರಿ ಸ್ವಚ್ಛತೆ ವೆಚ್ಚ | 13426 |
| 29 | | | ಅಂದಾಜು ಪಟ್ಟಿ ಶುಲ್ಕ P.W.D | – |
| 30 | | | ಸದಸ್ಯತ್ವ ಶುಲ್ಕ | 3000 |
| 31 | | | ಸಭಾ ವೆಚ್ಚ | 2000 |
| 32 | | | ಇತರೆ ವೆಚ್ಚ | 3277 |
| | | | ಜೆರಾಕ್ಸ್ ಟೋನರ್ | 19340 |
| | | | ಮಹಾ ಯೋಜನೆ – | 748000 |
| | | | ನಕ್ಷೆ ತಯಾರಿಕೆ | – |
| 33 | | | ಅಧ್ಯಕ್ಷರ ವಾಹನ ಚಾಲಕರು/ಡಿ ಗ್ರೂಪ್ | 237188 |
| | | | 31.03.2018ಕ್ಕೆ ಅಂತಿಮ ಶಿಲ್ಕು | 4669820 |
| | **ಒಟ್ಟು ರೂ.** | **11634466** | **ಒಟ್ಟು ರೂ.** | **11634466** |

## ಅನುಬಂಧ-01

**ಚಾಮರಾಜನಗರ, ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸಂಸ್ಥೆಯ 1998-99 ರಿಂದ 2017-18ನೇ ಸಾಲಿನವರೆಗಿನ ಲೆಕ್ಕ ತಪಾಸಣಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿಗಳ ವಿವರ ಪಟ್ಟಿ.**

| ಕ್ರ.ಸಂ | ವರದಿಯ ವರ್ಷ | ಕಂಡಿಕೆ ಸಂಖ್ಯೆ | ಆಕ್ಷೇಪಣೆ ಮೊಬಲಗು | ಕಂಡಿಕೆ ಸಂಖ್ಯೆ | ವಸೂಲಾತಿ ಮೊಬಲಗು |
|---|---|---|---|---|---|
| 1 | 1998-99 ರಿಂದ 1999-2000 | **03** | 30409.00 | **03** | 2164.00 |
| 2 | 2000-01 | **-** | 0 | **01** | 17707.00 |
| 3 | 2001-02 | **-** | 0 | **01** | 750.00 |
| 4 | 2002-03 | **-** | 0 | **04** | 1202.00 |
| 5 | 2003-04 | **02** | 376074.00 | **06** | 22468.00 |
| 6 | 2004-05 | **03** | 57306.00 | **-** | 0 |
| 7 | 2005-06 | **06** | 104107.00 | **01** | 956.00 |
| 8 | 2006-07 | **-** | 0 | **02** | 350.00 |
| 9 | 2007-08 | **01** | 35445.00 | **02** | 7694.00 |
| 10 | 2008-09 | **01** | 17636.00 | **01** | 60.00 |
| 11 | 2009-10 | **01** | 32460.00 | **02** | 2150.00 |
| 12 | 2010-11 | **01** | 13525.00 | **01** | 7433.00 |
| 13 | 2011-12 | **01** | 5847.00 | **02** | 3855.00 |
| 14 | 2012-13 | **01** | 30823.00 | **01** | 3535.00 |
| 15 | 2013-14 | **01** | 1000.00 | **01** | 376.00 |
| 16 | 2014-16 | **01** | 119271.00 | **03** | 547242.00 |
| 17 | 2016-17 | **01** | 13426.00 | **02** | 9123.00 |
| 18 | 2017-18 | **03** | 4672786.00 | **04** | 243869.00 |
| | **ಒಟ್ಟು** | **26** | **5510115.00** | **37** | **870934.00** |

<u>ಅನುಬಂಧ–2</u>

<u>ಹೂಡಿಕೆಗಳ ವಿವರ</u>

| ಕ್ರ.ಸಂ | ಹೂಡಿಕೆ ಮಾಡಿದ ದಿನಾಂಕ | ಬ್ಯಾಂಕ್ ಹೆಸರು | ಹೂಡಿಕೆ ಸಂಖ್ಯೆ | ಹೂಡಿಕೆ ಮಾಡಿದ ಮೊಬಲಗು | ಹೂಡಿಕೆ ಮಾಡಿದ ಅವಧಿ | ಪರಿಪಕ್ವವಾಗುವ ದಿನಾಂಕ | ಪರಿಪಕ್ವವಾಗುವ ಮೊಬಲಗು | ಬಡ್ಡಿದರ ಶೇ. | ಷರಾ |
|---|---|---|---|---|---|---|---|---|---|
| 1 | 11.5.2018 | ಎಸ್.ಬಿ.ಎಂ | 64172877364, | 8843429 | 01 ವರ್ಷ | 11.5.2019 | 9423137.00 | 6.40% | |
| 2 | 26.7.2018 | ಎಸ್.ಬಿ.ಎಂ | 64122815454, | 8774140 | 02 ವರ್ಷ | 24.7.2019 | 9932792.00 | 6.25% | |
| 3 | 2.1.2018 | ಎಸ್.ಬಿ.ಎಂ | 64187542750, | 3468710 | 01 ವರ್ಷ | 15.12.2018 | 3690639.00 | 6.25% | |
| 4 | 30.8.2018 | ಎಸ್.ಬಿ.ಎಂ | 64082059203, | 1675869 | 01 ವರ್ಷ | 11.08.2018 | 1791005.00 | 6.70% | |
| 5 | 8.8.2017 | ಕೆನರಾ ಬ್ಯಾಂಕ್ | 079740100130017, | 794751 | 01 ವರ್ಷ | 8.8.2018 | 849770.00 | 6.75% | |
| 6 | 25.7.2018 | ಸಿಂಡಿಕೇಟ್ ಬ್ಯಾಂಕ್ | 17064050029870, | 3344866 | 01 ವರ್ಷ | 25.7.2019 | 3574666.00 | 6.70% | |
| | | **ಒಟ್ಟು** | | **26901765** | | | **29262009** | | |